ಸಂಪುಟ 01 । ಸಂಚಿಕೆ 96 । ಶನಿವಾರ 21 ಫೆಬ್ರವರಿ 2026 । ಪುಟ 4 । ಬೆಲೆ-2 ರೂ.

ಇರ್ಫಾನ್ ಕೆ
ಸಂಪಾದಕರು

M A ವಹಾಬ್
ಪ್ರಧಾನ ಸಂಪಾದಕರು

# ನೈಜ್ಯ ದೆಸೆ

NAIJYA DESE

ಸತ್ಯದ ದಿಕ್ಕು TRUE PATH

ಕನ್ನಡ ದಿನ ಪತ್ರಿಕೆ

ಸಿಂಧನೂರು, ಮಸ್ಕಿ ಮಾನ್ವಿ, ಲಿಂಗಸೂರು, ರಾಯಚೂರ,ದೇವದುರ್ಗ ಬಳ್ಳಾರಿ, ಕೊಪ್ಪಳ ಯಾದಗಿರಿ, ಕಲಬುರ್ಗಿ, ಬೀದರ, ವಿಜಯಪುರ. ಗದಗ, ವಿಜಯನಗರ. ಏಕಕಾಲಕ್ಕೆ ಪ್ರಕಟಣೆ

REGIONAL KANNADA DAILY MORNING

RNI code: KNKAN/25/A3581 ಮೋ: 9902277588, 9880707587, 9008787586 naijyadese@gmail.com

## ಈ ದಿನದ ವಿಶೇಷ

1) ಅಂತರರಾಷ್ಟ್ರೀಯ ಮಾತೃಭಾಷಾ ದಿನ

ಭಾಷೆಯ ವೈವಿಧ್ಯತೆ ಮತ್ತು ಅದರ ವೈವಿಧ್ಯತೆಯನ್ನು ಅರಿತುಕೊಳ್ಳಲು ಅಂತರರಾಷ್ಟ್ರೀಯ ಮಾತೃಭಾಷಾ ದಿನವನ್ನು ವಾರ್ಷಿಕವಾಗಿ ಫೆಬ್ರವರಿ 21 ರಂದು ವಿಶ್ವದಾದ್ಯಂತ ಆಚ-ರಿಸಲಾಗುತ್ತದೆ. ಈ ದಿನವು ಪ್ರಪಂಚದಾದ್ಯಂತ ಭಾಷೆ ಮತ್ತು ಸಾಂಸ್ಕೃತಿಕ ವೈವಿಧ್ಯತೆಯ ಅರಿವನ್ನು ಉತ್ತೇಜಿಸುತ್ತದೆ. ನವೆಂಬರ್ 17, 1999 ರಂದು, ಇದನ್ನು ಮೊದಲು ಯುನೆಸ್ಕೋ ಘೋಷಿಸಿತು.

## ಸುಭಾಷಿತ

ನಾವು ಹೇಳಿದ ಸುಳ್ಳಿಗೆ ನಾವೇ ಜವಾಬ್ದಾರರು..!! ಸುಳ್ಳನ್ನು ನಾವೇ ರಕ್ಷಿಸಿಕೊಳ್ಳಬೇಕು..!! "ಆದರೆ ಸತ್ಯ ಹಾಗಲ್ಲ" ಸತ್ಯ ಶಾಶ್ವತವಾಗಿ ನಮ್ಮನ್ನು ರಕ್ಷಿಸುತ್ತದೆ..!!

ಸ್ವಾಮಿ ವಿವೇಕಾನಂದ

# ಬಾಗಲಕೋಟೆಯಲ್ಲಿ ಶಿವಾಜಿ ಜಯಂತಿ ಶೋಭಾ ಯಾತ್ರೆ ಮೇಲೆ ಕಲ್ಲು ತೂರಿದ ಪ್ರಕರಣ :8 ಮಂದಿ ವಶಕ್ಕೆ

**ಬೆಂಗಳೂರು: ಬಾಗಲಕೋಟೆಯಲ್ಲಿ ಶಿವಾಜಿ ಜಯಂತಿ ಅಂಗವಾಗಿ ನಡೆಯುತ್ತಿದ್ದ ಶೋಭಾ ಯಾತ್ರೆಯ ಮೇಲೆ ಕಲ್ಲು ತೂರಿದ್ದ ಘಟನೆಗೆ ಸಂಬಂಧಪಟ್ಟಂತೆ ತಂಜೀರ್ ಸೇರಿದಂತೆ ಎಂಟು ಮಂದಿಯನ್ನು ಪೊಲೀಸರು ವಶಕ್ಕೆ ಪಡೆದಿದ್ದಾರೆ. ಸದ್ಯಕ್ಕೆ ಪರಿಸ್ಥಿತಿ ಶಾಂತವಾಗಿದೆ. ಬಂಧಿತರನ್ನು ತಂಜೀರ್ (28) , ಮುಜ್ಜು (23), ಸದ್ದಾಂ(22), ಫಯಾಜ್(24), ಸರ್ಫರಾಜ್(33), ರಿಯಾನ್(21), ಅಯಾನ್(19), ವಸೀಮ್(22) ಎಂದು ಗುರುತಿಸಲಾಗಿದೆ.**



ನಿನ್ನೆ ಬಾಗಲಕೋಟೆಯ ನವನಗರದ ವಿದ್ಯಾಗಿರಿಯಲ್ಲಿ ಶಿವಾಜಿ ಜಯಂತ್ಯೋತ್ಸವದ ಅಂಗವಾಗಿ ಶೋಭಾಯಾತ್ರೆ ಆಯೋಜಿಸಲಾಗಿ-ತ್ತು. ರಂಜಾನ್ ಉಪವಾಸ ಆರಂಭದ ದಿನಗಳಾಗಿರುವುದರಿಂದ ಮಸೀದಿಯಲ್ಲಿ ಪ್ರಾಥ-ರ್ನೆ ಮುಗಿದ ಬಳಿಕವೇ ಮೆರವಣಿಗೆಗೆ ಸಮಯ ನೀಡಲಾಗಿತ್ತು. ರಾತ್ರಿ 9.30ರ ಬಳಿಕ ಶಿವಾಜಿ ಭಾವಚಿತ್ರವನ್ನು ಒಳಗೊಂಡ ಶೋಭಾಯಾತ್ರೆ ಡಿಜೆಯೊಂದಿಗೆ ನಡೆಯುತ್ತಿತ್ತು. ಕಿಲ್ಲಾಗಲ್ಲಿಯ ಪಂಕಾ ಮಸೀದಿಯಿಂದ ರಾತ್ರಿ 10.06 ಗಂಟೆಗೆ ಸರಿಯಾಗಿ ಮೆರವಣಿಗೆಯ ಮೇಲೆ ಕಲ್ಲು ತೂರಾಟ ನಡೆದಿದೆ. ಶೋಭಾಯಾತ್ರೆ ಇನ್ನೂ ಹಿಂದೆ ಇದ್ದಿದ್ದರಿಂದ ಭದ್ರತೆಗೆ ನಿಯೋಜಿಸಿದ್ದ ಪೊಲೀಸರೆಡೆಗೆ ಕಲ್ಲು ಹಾಗೂ ಪಾದರಕ್ಷೆಗಳುನ್ನು ತೂರಿದ್ದಾರೆ. ಎಸ್‌ಪಿ ಸಿದ್ದಾರ್ಥ ಗೋಯಲ್ ಅವರ ಭುಜಕ್ಕೆ ಕಲ್ಲು ತಾಗಿದೆ.

ಕೆಲ ಸಿಬ್ಬಂದಿಗಳಿಗೆ ಗಾಯಗಳಾಗಿವೆ. ಪೊಲೀಸರು ಶಾಂತರೀತಿಯಿಂದ ವರ್ತಿಸಿ ಪರಿಸ್ಥಿತಿಯನ್ನು ನಿಯಂತ್ರಿಸಿದ್ದಾರೆ. ಹಿಂದೂ ಸಂಘಟನೆಗಳ ಮುಖಂಡರು ಪ್ರತಿಭಟನೆಗೆ ಮುಂದಾಗಿದ್ದಾರೆ. ಪೊಲೀಸರು ಮನವೊಲಿಸಿದ್ದಾರೆ. ಮಸೀದಿಯ ಮುಖಂಡರು ಮುಂದೆ ನಿಂತು ಮೆರವಣಿಗೆಗೆ ಮುಂದೆ ಸಹಕರಿಸಿದ್ದಾರೆ. ಅದರ ಬಳಿಕ ಗಲಭೆಗಳು ಆರಂಭಗೊಂಡಿವೆ. ಕೆಲವರು ರಸ್ತೆ ಬದಿಯಲ್ಲಿದ್ದ ಅಂಗಡಿಗಳಿಗೆ ಬೆಂಕಿ ಹಚ್ಚಿದ್ದಾರೆ. ಇದರಿಂದ ಬಾಗಲಕೋಟೆಯಲ್ಲಿ ಉದ್ವಿಗ್ನ ಪರಿಸ್ಥಿತಿ ನಿರ್ಮಾಣವಾಗಿತ್ತು. ಸಿಸಿಟಿವಿ ಕ್ಯಾಮೆರಾವನ್ನು ಆದ-ರಿಸಿ ತನಿಖೆ ನಡೆಸಿದ ಪೊಲೀಸರು ತಂಝೀರ್ ಹಾಗೂ ಎಂಟು ಮಂದಿಯನ್ನು ವಶಕ್ಕೆ ಪಡೆದುಕೊಂಡಿದ್ದಾರೆ. ಪರಿಸ್ಥಿತಿ ನಿಯಂತ್ರಣಕ್ಕಾಗಿ ಫೆಬ್ರವರಿ 24ರವರೆಗೂ ನಿಷೇಧಾಜ್ಞೆ ಜಾರಿಗೊಳಿಸಲಾಗಿದೆ.

ಈ ಬಗ್ಗೆ ಪ್ರತಿಕ್ರಿಯಿಸಿರುವ ಎಸ್‌ಪಿ ಸಿದ್ದಾರ್ಥ ಗೋಯೆಲ್, ಘಟನೆಗೆ ಕೋಮು ಗಲಭೆಯ ವ್ಯಾಖ್ಯಾನ ಮಾಡಬಾರದು. ಬಾಗಲಕೋಟೆಯಲ್ಲಿ ಭಾವೈಕ್ಯತೆ ಇದೆ. ಶೋಭಾಯಾತ್ರೆ ಮುಂದುವರೆಯಲು ಮಸೀದಿ ಮುಖಂಡರೇ ಸಹಕಾರ ನೀಡಿದ್ದಾರೆ. ನಿನ್ನೆ ರಾತ್ರಿ 10.06 ಗಂಟೆಗೆ ಸರಿಯಾಗಿ ಕಿಡಿಗೇಡಿಗಳು ಕಲ್ಲುತೂರಾಟ ಮಾಡಿದ್ದಾರೆ. ಅವರನ್ನು ಬಂಧಿಸಿ ಕ್ರಮ ಕೈಗೊಳ್ಳುತ್ತೇವೆ ಎಂದಿದ್ದಾರೆ. ಪಾದರಕ್ಷೆಗಳನ್ನು ಇಡಲು ಮಸೀದಿಯ ಗೋಡೆ ಅಂಚಿನಲ್ಲಿದ್ದ ಶೂ ರ್ಯಾಕ್‌ಗೆ ಆಸರೆಯಾಗಿ ಎರಡು ಕಲ್ಲುಗಳಿದ್ದವು. ತಂಝೀರ್ ಆ ಕಲ್ಲುಗಳನ್ನೇ ಮೆರವಣಿಗೆಯತ್ತ ತೂರಿದ್ದಾನೆ. ಅಲ್ಲಿದ್ದ ಚಪ್ಪಲಿಯನ್ನು ಎಸೆದಿದ್ದಾನೆ. ಆತ ತೂರಿದ್ದ ಕಲ್ಲುಗಳು ಶೋಭಾ ಯಾತ್ರೆವರೆಗೂ ತಲುಪಿಲ್ಲ. ಕೆ ಎಸ್ ಆರ್ ಪಿ ಯ ಸಿಬ್ಬಂದಿಗಳು ತಮಗೆ ಬಿದ್ದಿವೆ ಎಂದಿದ್ದಾರೆ.

ಪರಿಸ್ಥಿತಿ ನಿಯಂತ್ರಿಸಲು ಎರಡೂ ಕಡೆಯ ಮುಖಂಡರು ಪೊಲೀಸರಿಗೆ ಸಹಕರಿಸಿದ್ದಾರೆ. ಆರೋಪಿ ತಂಜೀರ್ ಈ ಹಿಂದೆ ಇದೇ ರೀತಿಯ ದುಷ್ಕೃತ್ಯಗಳಲ್ಲಿ ಭಾಗಿಯಾಗಿರುವ ಮಾಹಿತಿಗಳು ಸದ್ಯಕ್ಕಿಲ್ಲ ಎಂದರು.

**ಸಭೆ:** ಘಟನೆ ನಡೆದು 14 ಗಂಟೆಗಳಾದರೂ ಆರೋಪಿಗಳನ್ನು ಬಂಧಿಸಿಲ್ಲ ಎಂದು ಆರೋಪಿಸಿ ಹಿಂದೂ ಸಂಘಟನೆಗಳ ಮುಖಂಡರು ಇಂದು ಕಿಲ್ಲಾಗಲ್ಲಿಯ ಶಿವಭವಾನಿ ಸಭಾಂಗಣದಲ್ಲಿ ಸಭೆ ನಡೆಸಿದರು. ಪರಿಸ್ಥಿತಿ ನಿಯಂತ್ರಿಸಲು ಫೆಬ್ರವರಿ 24ರ ವರೆಗೆ ನಿಷೇಧಾಜ್ಞೆ ಜಾ-ರಿಗೊಳಿಸಲಾಗಿದೆ, ಆದರೆ ಪೊಲೀಸರು ಸರಿಯಾಗಿ ಕಾರ್ಯನಿರ್ವಹಿಸಿಲ್ಲ ಎಂದು ಆರೋಪಿಸಿ ನಿಷೇಧಾಜ್ಞೆ ನಡುವೆಯೂ ಸಭೆ ನಡೆಸುವುದಾಗಿ ಹಿಂದೂ ಸಂಘಟನೆಗಳ ಮುಖಂಡರು ಹೇಳಿದ್ದರು.

## ಗೃಹಲಕ್ಷ್ಮೀ ಫಲಾನುಭವಿಗಳಿಗೆ ಸದ್ಯದಲ್ಲೇ ನಾಲ್ಕನೇ ಕಂತಿನ ಅನುದಾನ

ನೈಜ್ಯ ದೆಸೆ ನ್ಯೂಸ್

**ರಾಯಚೂರು: ಗೃಹಲಕ್ಷ್ಮೀ ಯೋಜನೆಯಡಿಯಲ್ಲಿ 2025-26ನೇ ಸಾಲಿನ ನಾಲ್ಕನೇ ಕಂತಿನ ಅನುದಾನದಲ್ಲಿ ರಾಯಚೂರು ಜಿಲ್ಲೆಯ 4,37,601 ಫಲಾನುಭವಿಗಳಿಗೆ 87,53,22,000 ರೂ.ಗಳನ್ನು ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು ರಾಯಚೂರು ಅವರ ಮೂಲಕ ಡಿಬಿಟಿ ಪ್ರಕ್ರಿಯೆ ಚಾಲ್ತಿ ಮಾಡಲಾಗಿದ್ದು,**



ಮುಂದಿನ ಎರಡು ಮೂರು ದಿನಗಳಲ್ಲಿ ಫಲಾನುಭವಿಗಳ ಖಾತೆಗೆ ಜಮಾವಾಗುತ್ತದೆ ಎಂದು ಜಿಲ್ಲಾ ಮಟ್ಟದ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರ ಸಮಿತಿಯ ಅಧ್ಯಕ್ಷರಾದ ಪಾಮಯ್ಯ ಮುರಾರಿ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಎಸ್ಟಿ ಮೋರ್ಚಾ ಜಿಲ್ಲಾ ಪ್ರಧಾನ ಕಾರ್ಯದರ್ಶಿಯಾಗಿ ಮೌನೇಶ ನಾಯಕ ನೇಮಕ

ನೈಜ್ಯ ದೆಸೆ ನ್ಯೂಸ್

**ಮಸ್ಕಿ: ಭಾರತೀಯ ಜನತಾ ಪಾರ್ಟಿಯ ಎಸ್ಟಿ ಮೋರ್ಚಾದ ಜಿಲ್ಲಾ ಪ್ರಧಾನ ಕಾರ್ಯದರ್ಶಿಯಾಗಿ ಮೌನೇಶ ನಾಯಕರನ್ನು ನೇಮಿಸಿ ಬಿಜೆಪಿ ಜಿಲ್ಲಾಧ್ಯಕ್ಷ ವೀರನಗೌಡ ಬಿ.ಪಾಟೀಲ್ ಆದೇಶ ಹೊರಡಿಸಿದ್ದಾರೆ.**



ಮೌನೇಶ ನಾಯಕ

ಮುಂಬರುವ ದಿನಗಳಲ್ಲಿ ಪಕ್ಷವನ್ನು ಗ್ರಾಮೀಣ ಮಟ್ಟದಲ್ಲಿ ಬಲಪಡಿಸುವ ಜತೆಗೆ ಗ್ರಾ.ಪಂ, ತಾ.ಪಂ ಮತ್ತು ಜಿಲ್ಲಾ ಪಂಚಾಯಿತಿ ಚುನಾವಣೆಯಲ್ಲಿ ಪಕ್ಷದ ಅಭ್ಯರ್ಥಿಗಳನ್ನು ಗೆಲ್ಲಿಸುವ ಮುಲಕ ಬಿಜೆಪಿ ಪಕ್ಷವನ್ನು ಅಧಿಕಾರಕ್ಕೆ ತರುವ ನಿಟ್ಟಿನಲ್ಲಿ ಕಾರ್ಯಪ್ರವೃತ್ತರಡಗಬೇಕೆಂದು ತಿಳಿಸಿದ್ದಾರೆ.

# ಪ್ರಧಾನಿ ನೇತೃತ್ವದಲ್ಲಿ ದೇಶದೆಲ್ಲೆಡೆ ಧಾರ್ಮಿಕ, ಸಾಂಸ್ಕೃತಿಕ ಪುನರುತ್ಥಾನ: ಜೋಶಿ

ನೈಜ್ಯ ದೆಸೆ ನ್ಯೂಸ್

**ರಾಯಚೂರು: ಪ್ರಧಾನಿ ನರೇಂದ್ರ ಮೋದಿ ಅವರ ನೇತೃತ್ವದಲ್ಲಿ ಭಾರತ ಇಂದು ಬಹುದೊಡ್ಡ ಪರಿವರ್ತನೆ ಕಾಣುತ್ತಿದ್ದು, ದೇಶದೆಲ್ಲೆಡೆ ಧಾರ್ಮಿಕ, ಸಾಂಸ್ಕೃತಿಕ ಪುನರುತ್ಥಾನವಾಗುತ್ತಿದೆ ಎಂದು ಕೇಂದ್ರ ಆಹಾರ ಮತ್ತು ನಾಗರಿಕ ಸರಬರಾಜು ಸಚಿವ ಪ್ರಲ್ಹಾದ ಜೋಶಿ ಹೇಳಿದರು.**



ರಾಯಚೂರು ಜಿಲ್ಲೆ ಲಿಂಗಸಗೂ-ರಿನ ಗೆಜ್ಜಲಗಟ್ಟಾದ ವೀರನಾಗಮ್ಮ ದೇವಿ ನೂತನ ದೇವಾಲಯ ಲೋಕಾರ್ಪಣೆ ಹಾಗೂ ಬ್ರಹ್ಮಕಲಶೋತ್ಸವ ಸಮಾರಂಭ ಉದ್ದೇಶಿಸಿ ಮಾತನಾಡಿದ ಅವರು, ಭಾರತ ಸಾಂಸ್ಕೃತಿಕ ನೆಲೆಯುಳ್ಳ ರಾಷ್ಟ್ರವಾಗಿದ್ದು, ಅನೇಕ ವೈಶಿಷ್ಟ್ಯಗಳ ಸಂಗಮದಿಂದ ಕೂಡಿದೆ. ಪ್ರಮುಖವಾಗಿ ಜ್ಞಾನ, ವಿಜ್ಞಾನ, ಧರ್ಮ, ಸಂಪ್ರದಾಯದ ಪರಿಕಲ್ಪನೆ ನಮ್ಮ ದೇಶದಲ್ಲಿ ಅಗಾಧವಾಗಿದೆ. ಹೀಗಾಗಿ ಭಾರತದ ಹಿರಿಮೆಯನ್ನು ಇಂದು ವಿಶ್ವವೇ ಕೊಂಡಾಡುತ್ತಿದೆ ಎಂದು ಹೇಳಿದರು.

ನೀವು ಯಾವುದೇ ದೇವರನ್ನು ಆರಾಧಿಸಿ, ಪೂಜಿಸಿ. ಆದರೆ, ಜೀವನವನ್ನು ನ್ಯಾಯ, ನೀತಿ, ಶಾಂತಿ, ಧರ್ಮದಿಂದ ನಡೆಸಬೇಕು ಎಂದಿದೆ ನಮ್ಮ ಸನಾತನ ಧರ್ಮ ಎಂದ ಸಚಿವರು, ಪೂಜಾ ಪದ್ಧತಿ ಮೀ-ರಿದ ಒಂದು ಧರ್ಮವಿದ್ದು, ಅದೇ 'ಮಾನವ ಧರ್ಮ ವಾಗಿದೆ ಎಂದು ಪ್ರತಿಪಾದಿಸಿದರು. ಸಮಾಜದಲ್ಲಿ ಹಿಂದೆ ಸ್ಪೃಶ್ಯ-ಅಸ್ಪ್ರಶ್ಯ ಎಂಬುದಿರಲಿಲ್ಲ. ಅದ್ಹೇಗೋ ನಡುವೆ ಹೊಕ್ಕಿದೆ. ಅಸ್ಪ್ರಷ್ಯತೆಯನ್ನು ಒಪ್ಪುವ ಪ್ರಶ್ನೆಯೇ ಇಲ್ಲ. ಹಾಗಾಗಿ ಅಸ್ಪೃಶ್ಯತೆಯನ್ನು ಹೋಗಲಾಡಿಸಿ ದೇಶ ಮತ್ತು ಸಮಾಜವನ್ನು ಒಗ್ಗೂಡಿಸುವ ಪ್ರಯತ್ನವನ್ನು ಎಲ್ಲಾ ಮಠಾಧೀಶರು ಮಾಡಬೇಕಿದೆ ಎಂದು ಆಶಿಸಿದರು.

ಪ್ರಧಾನಿ ನರೇಂದ್ರ ಮೋದಿ ಅವರ ನೇತೃತ್ವದಲ್ಲಿ ದೇಶದೆಲ್ಲೆಡೆ ಇಂದು ಧಾರ್ಮಿಕ, ಸಾಂಸ್ಕೃತಿಕ, ಆಧ್ಯಾತ್ಮಿಕ ಪುನರುತ್ಥಾನದ ಕೈಂಕರ್ಯ ನಡೆದಿದೆ. ಮಕ್ಕಳಲ್ಲಿ ಸಾಂಸ್ಕೃತಿಕ, ಆಧ್ಯಾತ್ಮಿಕ ಪರಿಕಲ್ಪನೆ ಮೂಡಿಸಲಾಗುತ್ತಿದೆ ಎಂದು ಹೇಳಿದರು. ದೇಶದಲ್ಲಿ ಪ್ರಸಿದ್ಧ ಧಾರ್ಮಿಕ ಕ್ಷೇತ್ರಗಳ ಪರಿಚಯ ಮತ್ತು ಶ್ರೀರಾಮನ ಪರಿಚಯಕ್ಕಾಗಿ ರಾಮಾಯಣ ಸರ್ಕ್ಯೂಟ್ ಎಂಬ ಆಧ್ಯಾತ್ಮಿಕ ಪ್ರವಾಸವನ್ನು ಕೇಂದ್ರ ಸರ್ಕಾರ ಆರಂಭಿಸಿದೆ ಎಂದರು. ದೇಶದಲ್ಲಿ ಶ್ರೀರಾಮನ ಕುರುಹುಗಳಿರುವ ಕ್ಷೇತ್ರಗಳು ಸೇರಿದಂತೆ ಒಟ್ಟು 15 ಧಾರ್ಮಿಕ, ಆಧ್ಯಾತ್ಮಿಕ ಪ್ರೇಕ್ಷಣೀಯ ಸ್ಥಳಗಳಿಗೆ ಕರೆದೋಯ್ದು ಪರಿಚಯಿಸುವ ಕೈಂಕರ್ಯವನ್ನು ಮಾಡಲಾಗುತ್ತಿದೆ. ಅಯೋಧ್ಯೆ, ಹಂಪಿ, ಚಿತ್ರಕೂಟ, ನಾಸಿಕ್, ನಾಗ್ಪುರ ಹೀಗೆ ಪ್ರಮುಖ ಸ್ಥಳಗಳಿಗೆ ಮಕ್ಕಳಿಗೆ ಆದ-ಧ್ಯಾತ್ಮಿಕ ಪ್ರವಾಸಕ್ಕಾಗಿ ರೈಲ್ವೆ ಸಂಚಾರ ಆರಂಭಿಸಿದೆ ಎಂದು ಸಚಿವ ಪ್ರಲ್ಹಾದ ಜೋಶಿ ಹೇಳಿದರು.

ಕೊಲ್ಲೂರು ಮೂಕಾಂಬಿಕಾ ದೇವಾಲಯದ ಪ್ರಧಾನ ಅರ್ಚಕರಾದ ಡಾ.ಕೆ. ಎನ್. ನರಸಿಂಹ ಅಡಿಗರವರ ನೇತೃತ್ವದಲ್ಲಿ ವೀರನಾಗಮ್ಮ ದೇವಿ ಪ್ರಾಣ ಪ್ರತಿಷ್ಠಾನೆ ನೆರವೇರಿತು. ಚಿತ್ರದುರ್ಗ, ಬಾಗಲಕೋಟೆ ಭೋವಿ ಗುರುಪೀಠದ ಪೀಠಾಧೀಶರಾದ ಜಗದ್ಗುರು ಇಮ್ಮಡಿ ಸಿದ್ಧರಾಮೇಶ್ವರ ಮಹಾಸ್ವಾಮೀಜಿ ಸಾನಿಧ್ಯ ವಹಿಸಿದ್ದರು. ಸಮಾರಂಭದಲ್ಲಿ ವಿಧಾನ ಪರಿಷತ್ ವಿಪಕ್ಷ ನಾಯಕ ಛಲವಾದಿ ನಾರಾಯಣಸ್ವಾಮಿ, ಪರಿಷತ್ ಸದಸ್ಯರಾದ ಸಿ.ಟಿ.ರವಿ, ಶಾಸಕ ಮಾನಪ್ಪ ವಜ್ಜಲ, ಶಿವರಾಜ ಪಾಟೀಲ, ಮಾಜಿ ಶಾಸಕ ಪ್ರತಾಪ್ ಗೌಡ ಪಾಟೀಲ ಮುಂತಾದವರು ಉಪಸ್ಥಿತರಿದ್ದರು.

# ಶ್ರೀ ಶ್ರೀ ಶ್ರೀ ಪ್ರಸನಂದ ಪುರಿ ಸ್ವಾಮೀಜಿ ಆರೋಗ್ಯ ಚೇತರಿಕೆಗಾಗಿ ನೀರ್ ಮಾನ್ವಿ ಎಲ್ಲಮ್ಮ ದೇವಿಗೆ ವಿಶೇಷ ಪೂಜೆ ಶರಣಬಸವ ನಾಯಕ್ ಜಾನೇಕಲ್

ನೈಜ್ಯ ದೆಸೆ ನ್ಯೂಸ್

**ರಾಜನಹಳ್ಳಿ ಶ್ರೀ ಮಹರ್ಷಿ ವಾಲ್ಮೀಕಿ ಪೂಜ್ಯ ಪೀಠಾಧ್ಯಕ್ಷರಾದ ಶ್ರೀ ಶ್ರೀ ಶ್ರೀ ಪ್ರಸನ್ನಂದ ಪುರಿ ಸ್ವಾಮೀಜಿ ಯವರಿಗೆ ಆರೋಗ್ಯದಲ್ಲಿ ಏರುಪೇರು ಆಗಿ ಆರೋಗ್ಯದಲ್ಲಿ ವ್ಯತ್ಯಾಸ ಉಂಟಾಗಿ ಆಸ್ಪತ್ರೆಗೆ ದಾಖಲಾಗಿರುವ ಸುದ್ದಿ ತಿಳಿದು ಸಮಾಜದ ಮುಖಂಡರಿಗೆ ಬಂಧುಗಳಿಗೆ ಮನಸ್ಸಿಗೆ ಬೇಸರ ತಂದಿದೆ.**



ಶ್ರೀಗಳು ಸಂಪೂರ್ಣ ಗುಣಮುಖರಾಗಿ ಎಂದಿನಂತೆ ಸಮಾಜಮುಖಿ ಚಟುವಟಿಕೆಗಳಲ್ಲಿ ಮತ್ತೆ ಸಕ್ರಿಯರಾಗಲಿ ಎಂದು ಶ್ರೀ ಶರಣಬಸವ ನಾಯಕ ಜಾನೇಕಲ್ ಜಿಲ್ಲಾಧ್ಯಕ್ಷರು ನೇತೃತ್ವದಲ್ಲಿ ಶ್ರೀ ನೀರಮಾನ್ವಿ ಯಲ್ಲಮ್ಮ ದೇವಿ ದೇವಸ್ಥಾನ ತೆಂಗಿನಕಾಯಿ ಹೊಡೆಯುದರ ಮೂಲಕ ವಿಶೇಷ ಪೂಜೆ ಸಲ್ಲಿಸಿದರು. ಈ ಸಂದರ್ಭಗಳಲ್ಲಿ ಸಂಘಟನೆಯ ಪದಾಧಿಕಾರಿಗಳು ಹಾಗೂ ಸಮಾಜದ ಮುಖಂಡರದ ದೇವಸ್ಥಾನದ ಪ್ರಧಾನ ಅರ್ಚಕರಾದ ಪೂಜಾರಿ ಮಲ್ಲಿಕಾರ್ಜುನ ಗೋಪಾಲ್ ನಾಯಕ್ ನೀರಮಾನವಿ ಹನುಮೇಶ್ ನಾಯಕ ಗ್ರಾಮ ಪಂಚಾಯತ್ ಸದಸ್ಯರು ನೀರಮಾನವಿ ಕೃಷ್ಣ ನಾಯಕ ಮದ್ಲಾಪೂರ ಬಸವ ನೀರಮಾನವಿ ವೆಂಕಿ ನಾಗಪ್ಪ ನಾಯಕ ಶೀವು ನಾಯಕ ನೀರಮಾನವಿ ಉಪಾಧ್ಯಕ್ಷರಾದ ಭೀಮಯ್ಯ ನಾಯಕ ಚನ್ನಬಸವ ನಾಯಕ ಆಂಜಿನೇಯ್ಯ ಚಿದಾನಂದ್ ಸುರೇಶ ನಾಯಕ ಮಂಜುನಾಥ ನಾಯಕ ತುಪ್ಪದುರ ಅಭೀ ನಾಯಕ ತುಪ್ಪದೂರ ಮಹೇಶ್ ನಾಯಕ ಉಪಸ್ಥಿತರಿದ್ದರು.

# ಡಿಸ್ಲಡ್ಜಿಂಗ್ ವಾಹನಗಳ ಕಡ್ಡಾಯ ನೋಂದಣಿಗೆ ಸೂಚನೆ

ನೈಜ್ಯ ದೆಸೆ ನ್ಯೂಸ್

**ರಾಯಚೂರು: ರಾಯಚೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಖಾಸಗಿ ಸೆಪ್ಟಿಕ್ ಟ್ಯಾಂಕ್ ವಾಹನಗಳು ಅನಧಿಕೃತವಾಗಿ ಸ್ವಚ್ಛಮಾಡುತ್ತಿರುವುದು ಕಂಡುಬಂದಿರುತ್ತದೆ. ಆದ್ದರಿಂದ, ಖಾಸಗಿ ಡಿಸ್ಲಡ್ಜಿಂಗ್ ವಾಹನಗಳ ಮಾಲೀಕರು ರಾಯಚೂರು ಮಹಾನಗರ ಪಾಲಿಕೆಯಲ್ಲಿ ಕಡ್ಡಾಯವಾಗಿ ನೋಂದಣಿ ಮಾಡಿಕೊಳ್ಳಲು ಸೂಚಿಸಿದೆ.**

ತಪ್ಪಿದ್ದಲ್ಲಿ, ಮಹಾನಗರ ಪಾಲಿಕೆ ಅಧಿನಿಯಮ 1976 ರ ಪ್ರಕಾರ ಕ್ರಮ ಕೈಗೊಳ್ಳುವುದಲ್ಲದೇ ಮತ್ತು ಪ್ರೊಹಿಬಿಷನ್ ಆಫ್ ಎಂಪ್ಲಾಯ್ಮೆಂಟ್ ಆಸ್ ಮ್ಯಾನುವಲ್ ಸ್ಕ್ಯಾವೆಂಜರ್ಸ್ ಅಂಡ್ ಧೇರ್ ರಿಹ್ಯಾಬಿಟೇಶನ್ ಆಕ್ಟ್ -2023 (Prohibition of employment as manual scavengers and their rehabilitation act 2013) ರಡಿ ತಮ್ಮ ಮೇಲೆ ಕಾನೂನು ರೀತ್ಯಾ ಕಠಿಣ ಕ್ರಮ ಜರುಗಿಸಲಾಗುವುದು ಮತ್ತು ಪಾಲಿಕೆಯ ಡಿಸ್ಲಡ್ಜಿಂಗ್ ವಾಹನಗಳು ಅಥ-ವಾ ಪಾಲಿಕೆಯಿಂದ ನೋಂದಾಯಿತ ಡಿಸ್ಲಡ್ಜಿಂಗ್ ವಾಹನಗಳಿಂದ ಮಾತ್ರ ಸೆಪ್ಟಿಕ್ ಟ್ಯಾಂಕ್ ಸ್ವಚ್ಛಗೊಳಿಸಿಕೊಳ್ಳಲು ಸಾರ್ವಜನಿಕರಿಗೆ ತಿಳಿಯಪಡಿಸಲಾಗಿದೆ.

ಆದ್ದರಿಂದ ದಿ:23-02-2026 ರಂದು ಪಾಲಿಕೆಯ ಸಭಾಂಗಣದಲ್ಲಿ (ಹಳೆ ಜಿಲ್ಲಾಧಿಕಾ-ರಿಗಳ ಕಛೇರಿ) ಸಮಯ ಬೆಳಗ್ಗೆ 11 ಗಂಟೆಗೆ ಡಿಸ್ಲಡ್ಜಿಂಗ್ ವಾಹನ ಮತ್ತು ದಾಖಲಾತಿಗಳೊಂದಿಗೆ ಸಭೆಗೆ ಹಾಜರಾಗಲು ಮತ್ತು ದಿ:28-02-2026 ರೊಳಗಾಗಿ ಡಿಸ್ಲಡ್ಜಿಂಗ್ ವಾಹನಗಳನ್ನು ಪಾಲಿಕೆಯಲ್ಲಿ ಕಡ್ಡಾಯವಾಗಿ ನೋಂದಣಿ ಮಾಡಿಕೊಳ್ಳಲು ಸೂಚಿಸಲಾಗಿದೆ ಎಂದು ರಾಯಚೂರು ಮಹಾನಗರ ಪಾಲಿಕೆಯ ಆಯುಕ್ತರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಸುಚಿತಾ ಮಿಲೇನಿಯಂ ಕ್ರಷರ್ ಅಕ್ರಮ ಗಣಿಗಾರಿಕೆ ವಿರುದ್ಧ ಪ್ರತಿಭಟನೆ ಭ್ರಷ್ಟ ಅಧಿಕಾರಿಗಳ ಅಮಾನತು ಮತ್ತು ಕ್ರಿಮಿನಲ್ ಪ್ರಕರಣಕ್ಕೆ ಆಗ್ರಹ

ನೈಜ್ಯ ದೆಸೆ ನ್ಯೂಸ್

**ಮಾನ್ವಿ: ತಾಲೂಕು ನೀರಮಾನ್ವಿ ಗ್ರಾಮದ ಸರ್ವೆ ನಂ. 55/1 ಮತ್ತು 56ರಲ್ಲಿ ಕಾರ್ಯನಿರ್ವಹಿಸುತ್ತಿರುವ ಸುಚಿತಾ ಮಿಲೇನಿಯಂ ಪ್ರಾಜೆಕ್ಟ್ ಪ್ರೈ. ಲಿಮಿಟೆಡ್ ಸಂಸ್ಥೆಯ ಅಕ್ರಮ ಗಣಿಗಾರಿಕೆ ಹಾಗೂ ಅದಕ್ಕೆ ಸಾಥ್ ನೀಡುತ್ತಿರುವ ಅಧಿಕಾರಿಗಳ ಭ್ರಷ್ಟಾಚಾರದ ವಿರುದ್ಧ ಮಾನ್ವಿ ತಾಲೂಕು ಪಂಚಾಯತ್ ಆವರಣದಲ್ಲಿ ಬೃಹತ್ ಪ್ರತಿಭಟನೆ ಹಮ್ಮಿಕೊಳ್ಳಲಾಗಿದೆ ಎಂದು ಸಮಾಜ ಸೇವಕ ಗುರುರಾಜ ನಾಗಲಾಪುರ ಮಾತನಾಡಿದರು.**




ಸರ್ಕಾರಕ್ಕೆ ಕೋಟ್ಯಂತರ ರೂಪಾಯಿ ನಷ್ಟ ಉಂಟುಮಾಡುವ ರೀತಿಯಲ್ಲಿ ದಂಡದ ಮೊತ್ತದಲ್ಲಿ ಅಕ್ರಮವಾಗಿ ಕಡಿತ ಮಾಡಲಾಗಿದೆ ಎಂದು ಅವರು ಗಂಭೀರ ಆರೋಪ ಮಾಡಿದರು. ಅಂದಿನ ಸಹಾಯಕ ಆಯುಕ್ತರ ವರದಿಯಂತೆ ವಿಧಿಸಲಾಗಿದ್ದ 188 ಲಕ್ಷ ರೂ. ದಂಡವನ್ನು ಪ್ರಸ್ತುತ ಹಿರಿಯ ಭೂ ವಿಜ್ಞಾನಿ ಮುತ್ತಪ್ಪ, ಮಹೇಶ್ ಹಾಗೂ ಇಂಜಿನಿಯರ್ ನಂದಿನಿ ಅವರು ಅಕ್ರಮವಾಗಿ 82 ಲಕ್ಷ ರೂ.ಗೆ ಇಳಿಸಿರುವುದರಿಂದ ಸರ್ಕಾರಕ್ಕೆ ಭಾರೀ ನಷ್ಟ ಉಂಟಾಗಿದೆ ಎಂದು ಅವರು ಹೇಳಿದರು. ಕಂಪನಿಯು ನಿಗದಿತ ಜಾಗಕ್ಕಿಂತ ಸುಮಾರು 3 ಎಕರೆ ಹೆಚ್ಚುವರಿ ಕಂದಾಯ ಹಾಗೂ ಅರಣ್ಯ ಭೂಮಿಯನ್ನು ಒತ್ತುವರಿ ಮಾಡಿಕೊಂಡು ಅಕ್ರಮ ಗಣಿಗಾರಿಕೆ ನಡೆಸಿರುವುದು ಪಂಚನಾಮೆಯಿಂದ ಸಾಬೀತಾಗಿದ್ದು, ಈ ಹೆಚ್ಚುವರಿ ಗಣಿಗಾರಿಕೆಗೆ ಪುನಃ ದಂಡ ವಿಧಿಸಬೇಕು ಎಂದು ಆಗ್ರಹಿಸಿದರು.

ಎನ್.ಒ.ಸಿ ಪಡೆಯದೇ 5 ಎಕರೆ ಲೀಸ್ ಪಡೆದು ಪರಿಸರ ನಿಯಮಗಳನ್ನು ಉಲ್ಲಂಘಿಸಿ ದೊಡ್ಡ ಜನರೇಟರ್‌ಗಳ ಮೂಲಕ ಅಕ್ರಮ ಜಲ್ಲಿ ಉತ್ಪಾದನೆ ನಡೆಸಲಾಗುತ್ತಿದೆ ಎಂಬ ಆರೋಪವನ್ನೂ ಅವರು ವ್ಯಕ್ತಪಡಿಸಿದರು. ಕ್ರಷರ್ ಚಟುವಟಿಕೆಯಿಂದ ಬೆಟ್ಟದೂರು ಗ್ರಾಮದ ಮನೆಗಳಿಗೆ ಹಾನಿಯಾಗಿದ್ದು, ಸಂತ್ರಸ್ತರಿಗೆ ತಕ್ಷಣ ಪರಿಹಾರ ನೀಡಬೇಕು. ಅಕ್ರಮ ಎಸಗಿದ ಕಂಪನಿಯ ವಿರುದ್ಧ ಕ್ರಿಮಿನಲ್ ಮೊಕದ್ದಮೆ ದಾಖಲಿಸಿ, ಭ್ರಷ್ಟಾಚಾರದಲ್ಲಿ ಭಾಗಿಯಾಗಿರುವ ಅಧಿಕಾರಿಗಳಾದ ಮುತ್ತಪ್ಪ, ಮಹೇಶ್, ನಂದಿನಿ ಹಾಗೂ ಶೈಲಜಾ ಅವರನ್ನು ಕೂಡಲೇ ಅಮಾನತುಗೊಳಿಸಬೇಕು.

ಸರ್ಕಾರಕ್ಕೆ ವಂಚಿಸಿದ ದಂಡದ ಸಂಪೂರ್ಣ ಮೊತ್ತವನ್ನು ವಸೂಲಿ ಮಾಡಬೇಕು ಎಂದು ಅವರು ಒತ್ತಾಯಿಸಿದರು. ಈ ಪ್ರತಿಭಟನೆಯಲ್ಲಿ ಮುಖಂಡರುಗಳಾದ ಸಂಗನಬಸವ, ಕಿರಣ್ ಉದ್ಬಾಳ್, ಹೊಳೆಯಪ್ಪ, ಶಿವಕುಮಾರ್ ಕೆ., ಹುಸೇನಪ್ಪ ನಂದಿಹಾಳ್, ಶಿವಪುತ್ರ ಕುಪ್ಪೇಗುಡ್ಡ, ಈರಣ್ಣ ನಾಯಕ ಬುರಂಪುರ ಮುಂತಾದವರು ಭಾಗವಹಿಸಿ ಅಕ್ರಮದ ವಿರುದ್ಧ ಧ್ವನಿ ಎತ್ತಿದರು. ಅಲ್ಲದೆ, ಬೆಟ್ಟದೂರು ಮತ್ತು ನೀರಮಾನ್ವಿ ಗ್ರಾಮದ ಗ್ರಾಮಸ್ಥರು ಉಪಸ್ಥಿತರಿದ್ದರು.

## ಸಾಹಿತ್ಯ ಸಿಂಚನ

ತಾಯಿ–ಪ್ರೀತಿಯ ಸಾಗರ

ತಾಯಿಯ ಮಡಿಲು ಸ್ವರ್ಗದ ತಾಣ,
ಅವಳ ಮಾತು ಅಮೃತಧಾರ.

ನೋವು ಕಂಡಾಗ ನಗುವು ಕೊಡುವಳು,
ಬೀಳುವಾಗ ಕೈ ಹಿಡಿದು ಎಬ್ಬಿಸುವಳು.

ಹಸಿವಾದಾಗ ಅನ್ನದ ಕೈ,
ಅಳುವಾಗ ಮಮತೆಯ ಮೈ.
ಕತ್ತಲಲ್ಲಿ ಬೆಳಕಾಗುವಳು,
ಬಿಸಿಲಲ್ಲಿ ನೆರಳಾಗುವಳು.

ತಾಯಿ ಪ್ರೀತಿ ಅಳತೆಯಿಲ್ಲದ ಸಾಗರ,
ಅವಳ ಆಶೀರ್ವಾದ ಜೀವನದ ಆಭರಣ.

ಜೀವನ ಪಥದ ಮೊದಲ ಗುರು ಅವಳು,
ನಮ್ಮ ಹೃದಯದ ಶಾಶ್ವತ ದೇವತೆ ಅವಳು.

ತಾಯಿ ಎಂದರೆ ಮಮತೆಯ ಮೂರ್ತಿ,
ಅವಳಿಲ್ಲದೆ ಜೀವನವೇ ಖಾಲಿ ಭೂಮಿ

ರಮೇಶ್ ಬಿ

# ಕಾಮಗಾರಿಯನ್ನು ಆದಷ್ಟು ಬೇಗನೆ ಪೂರ್ಣಗೊಳಿಸಿ ಸಂಸದ ಜಿ. ಕುಮಾರ ನಾಯಕ

ನೈಜ್ಯ ದೆಸೆ ನ್ಯೂಸ್

**ಜಿ ಕುಮಾರ ನಾಯಕ ಅವರು ಲಿಂಗಸುಗೂರು ತಾಲೂಕಿನ ಚಿತ್ತಾಪುರ ಗ್ರಾಮದಲ್ಲಿ ನಡೆಯುತ್ತಿರುವ ಜಲಧಾರೆ ಮಹತ್ವಾಕಾಂಕ್ಷಿ ಕುಡಿಯುವ ನೀರಿನ ಯೋಜನಾ ಕಾಮಗಾರಿಯನ್ನು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿದರು. ಕೇಂದ್ರ ಸರ್ಕಾರದ ಎಚಿಟ Jeevan Mission ಯೋಜನೆಯಡಿ, NABARD ಹಾಗೂ Urban Development Department (UDD) ಅನುದಾನದೊಂದಿಗೆ ಸುಮಾರು 2200 ಕೋಟಿ ರೂ. ವೆಚ್ಚದಲ್ಲಿ ಈ ಮಹತ್ವದ ಯೋಜನೆ ಕೈಗೊಳ್ಳಲಾಗಿದೆ.**

ರಾಯಚೂರು ಜಿಲ್ಲೆಯ 860 ಗ್ರಾಮಗಳು ಹಾಗೂ ಸುಮಾರು 20 ಲಕ್ಷ ಜನರಿಗೆ ಶುದ್ಧ ಕುಡಿಯುವ ನೀರು ಒದಗಿಸುವ ಉದ್ದೇಶದಿಂದ ಈ ಯೋಜನೆ ರೂಪಿಸಲಾಗಿದೆ. ಮಾನ್ವಿ, ಮಸ್ಕಿ, ಕವಿತಾಳ, ತುರುವಿಹಾಳ, ಬಳಗಾನೂರು, ಸಿರವಾರ ಹಾಗೂ ಹಟ್ಟಿ ಪಟ್ಟಣ ಸೇರಿದಂತೆ ಅನೇಕ ಭಾಗಗಳಿಗೆ



DBOT ಆಧಾರದ ಮೇಲೆ ನೀರು ಸರಬರಾಜು ವ್ಯವಸ್ಥೆ ನಿರ್ಮಿಸಲಾಗುತ್ತಿದೆ. 2024ರೊಳಗೆ ಪೂರ್ಣಗೊಳ್ಳಬೇಕಿದ್ದ ಕಾಮಗಾರಿಯು ಇನ್ನೂ ಪೂರ್ಣವಾಗದಿರುವುದರಿಂದ ಸಂಸದರು ಅಧಿಕಾರಿಗಳಿಗೆ ತೀವ್ರ ಅಸಮಾಧಾನ ವ್ಯಕ್ತಪಡಿಸಿದರು.

ಜನರ ಕುಡಿಯುವ ನೀರಿನ ಸಮಸ್ಯೆ ಅತ್ಯಂತ ಗಂಭೀರವಾಗಿದೆ. ಕೆಲಸವನ್ನು ವಿಳಂಬ ಮಾಡದೇ, ಗುಣಮಟ್ಟ ಕಾಪಾಡಿಕೊಂಡು ತ್ವರಿತವಾಗಿ ಪೂರ್ಣಗೊಳಿಸಬೇಕು. ಯಾವುದೇ ಕಾರಣಕ್ಕೂ ನಿರ್ಲಕ್ಷ್ಯ ಸಹಿಸುವುದಿಲ್ಲ," ಎಂದು ಅವರು ಎಚ್ಚರಿಸಿದರು. ಯೋಜನೆ ಪೂರ್ಣಗೊಂಡ ನಂತರ ಪ್ರತಿದಿನ ಸುಮಾರು 1.60 ಕೋಟಿ ಲೀಟರ್ ನೀರನ್ನು ಸರಬರಾಜು ಮಾಡುವ ಸಾಮರ್ಥ್ಯ ಹೊಂದಿದ್ದು, ಜಿಲ್ಲೆಯ ಬಹುಭಾಗಗಳಲ್ಲಿ



ನೀರಿನ ಸಮಸ್ಯೆಗೆ ಶಾಶ್ವತ ಪರಿಹಾರ ದೊರೆಯಲಿದೆ ಎಂದು ಸಂಸದರು ತಿಳಿಸಿದರು. ಈ ವೇಳೆ ಜಲಧಾರೆ ಯೋಜನೆಯ ವ್ಯವಸ್ಥಾಪಕರು, ಗ್ರಾಮೀಣ ನೀರು ಸರಬರಾಜು ಇಲಾಖೆಯ ಅಧಿಕಾರಿಗಳು, ಸ್ಥಳೀಯ ಜನಪ್ರತಿನಿಧಿಗಳು, ಸಾರ್ವಜನಿಕರು ಹಾಗೂ ಕಾಂಗ್ರೆಸ್ ಪಕ್ಷದ ಮುಖಂಡರು ಹಾಜರಿದ್ದು ಕಾಮಗಾರಿಯ ಪ್ರಗತಿ ಕುರಿತು ಚರ್ಚೆ ನಡೆಸಿದರು. ಸಂಸದರು ಕಾಮಗಾರಿಯ ಪ್ರತಿಯೊಂದು ಹಂತವೂ ಪಾರದರ್ಶಕವಾಗಿ ನಡೆಯಬೇಕು ಹಾಗೂ ಜನರ ವಿಶ್ವಾಸಕ್ಕೆ ತಕ್ಕಂತೆ ಕಾರ್ಯಗತಗೊಳಿಸಬೇಕು ಎಂದು ಸೂಚಿಸಿದರು.

# ನ್ಯೂನ್ಯತೆಯುಳ್ಳ ಮಕ್ಕಳಿಗೆ ತಜ್ಞ ವೈದ್ಯರಿಂದ ತಪಾಸಣೆ ಶಿಬಿರ

ನೈಜ್ಯ ದೆಸೆ ನ್ಯೂಸ್

**ರಾಯಚೂರು: ಆರ್‌ಬಿಎಸ್‌ಕೆ ವೈದ್ಯಕೀಯ ತಂಡವು ಕ್ಷೇತ್ರ ಮಟ್ಟದಲ್ಲಿ ಗುರುತಿಸಿದ ನ್ಯೂನ್ಯತೆಯುಳ್ಳ ಮಕ್ಕಳಿಗೆ ತಜ್ಞ ವೈದ್ಯರಿಂದ ಫೆ.20ರಂದು ತಪಾಸಣೆ ಶಿಬಿರ ನಡೆಯಿತು. ರಾಯಚೂರು ನಗರದ ತಾಯಿ ಮಕ್ಕಳ ಆಸ್ಪತ್ರೆಯಲ್ಲಿ ನಡೆದ ಈ ಶಿಬಿರದಲ್ಲಿ ಹುಟ್ಟಿನಿಂದ 18 ವರ್ಷದೊಳಗಿನ ಜನ್ಮಜಾತ ಹೃದಯ ಖಾಯಿಲೆಯ 14 ಮಕ್ಕಳು, ಶೀಳು ತುಟಿ, ಶೀಳು ಅಂಗಳದ 3 ಮಕ್ಕಳಿಗೆ ತಪಾಸಣೆ ಮಾಡಲಾಯಿತು. ಮಕ್ಕಳ ತಜ್ಞರಾದ ಡಾ.ಇಮ್ರಾನ್ ತಪಾಸಣೆ ನಡೆಸಿದರು.**



ಜಿಲ್ಲೆಯಲ್ಲಿ ಪ್ರಸ್ತುತ 12 ಆರ್‌ಬಿಎಸ್‌ಕೆ ವೈದ್ಯಕೀಯ ತಂಡಗಳ ಕಾರ್ಯನಿರ್ವಹಿಸುತ್ತಿದ್ದು, ಪ್ರತಿ ತಂಡದಲ್ಲಿ ವೈದ್ಯರು, ಶೂಶ್ರೂಷಕರು, ನೇತ್ರಾಧಿಕಾರಿಗಳು ಇದ್ದು, ಅಂಗನವಾಡಿ, ಶಾಲೆಗಳಲ್ಲಿ ತಪಾಸಣೆ ಕೈಗೊಂಡು ರಾಯಚೂರನ ತಾಯಿ ಮಕ್ಕಳ ಆಸ್ಪತ್ರೆಯಲ್ಲಿ ಮುಖ್ಯ ವೈದ್ಯಾಧಿಕಾರಿ ಡಾ.ಪ್ರಜ್ವಲ್ ಕುಮಾರ್ ನೇತೃತ್ವದಲ್ಲಿ ಪ್ರತಿ ಮಂಗಳವಾರ, ಶುಕ್ರವಾರ ಮಕ್ಕಳ ತಜ್ಞರಿಂದ ತಪಾಸಣೆ ಮಾಡಿಸಲಾಗುತ್ತದೆ. ಇದಕ್ಕೆ ನವೋದಯ ಹಾಗೂ ರಿಮ್ಸ್ ಆಸ್ಪತ್ರೆಯ ತಜ್ಞರು ಕೈಜೋಡಿಸಿದ್ದಾರೆ. ಜಿಲ್ಲಾ ಆರಂಭಿಕ ಮಧ್ಯಸ್ಥಿಕೆ ಕೇಂದ್ರ: ಮಕ್ಕಳ ಬೆಳವಣಿಗೆಗೆ ಕಾರಣವಾಗುವ ನಾಲ್ಕು ಕಾರಣಗಳನ್ನು ಗುರುತಿಸಿ ಮಕ್ಕಳ ತಜ್ಞರು, ಇಎನ್‌ಟಿ ತಜ್ಞರು, ಮಾನಸಿಕ ತಜ್ಞರು, ಪೀಜಿಯೋಥೆರಪಿಸ್ಟ್ ಅವರು ಅಗತ್ಯ ಚಿಕಿತ್ಸೆ, ಸಲಹೆಗಳನ್ನು ನೀಡುತ್ತಾರೆ. ಪ್ರಸ್ತುತ ಪ್ರತಿದಿನ 15–20 ಮಕ್ಕಳು ಕೇಂದ್ರದ ಸದುಪಯೋಗ ಪಡೆಯುತ್ತಿದ್ದಾರೆ. ಖಾಸಗಿ ಆಸ್ಪತ್ರೆಗಳಲ್ಲಿ ಸಹ ಚಿಕಿತ್ಸೆ: ಜನ್ಮಾಜಾತ ಹೃದಯ ಸಂಬಂಧಿ ಖಾಯಿಲೆಗಳ ತುರ್ತು ಶಸ್ತ್ರಚಿಕಿತ್ಸೆಗಳಿಗಾಗಿ ಸರಕಾರದೊಂದಿಗೆ ಒಡಂಬಡಿಕೆ ಮಾಡಿಕೊಂಡ ಬೆಂಗಳೂರಿನ ಆಸ್ಪತ್ರೆಗಳಿಗೆ ಕಳುಹಿಸಲಾಗುತ್ತಿದೆ. ಈ ವೇಳೆ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ಸುರೇಂದ್ರಬಾಬು ಮಾತನಾಡಿ, ಪಾಲಕರು ತಮ್ಮ ಮಗುವಿಗೆ ಆರೋಗ್ಯ ಸಮಸ್ಯೆಗಳಿಗೆ ಹಲವು ಬಾರಿ ಖಾಸಗಿ ಆಸ್ಪತ್ರೆಗಳಿಗೆ ತೆರಳಿ ಲಕ್ಷಾಂತರ ರೂಪಾಯಿ ವೆಚ್ಚ ಮಾಡಿ ಆರ್ಥಿಕ ತೊಂದರೆಗೊಳಗಾಗುವುದನ್ನು ತಪ್ಪಿಸಲು ಸರಕಾರ ಅನುಷ್ಠಾನ ಮಾಡಿರುವ ಯೋಜನೆ ರಾಷ್ಟ್ರೀಯ ಬಾಲ ಸ್ವಾಸ್ಥ್ಯ ಕಾರ್ಯಕ್ರಮವಾಗಿದೆ. ಮಕ್ಕಳ ಜನನದ ನಂತರದ ಆರಂಭದಲ್ಲಿ ಕಂಡು ಬರುವ ಬೆಳವಣಿಗೆಗೆ ಕುಂಠಿತವಾಗುವ ಗಂಭೀರ ಆರೋಗ್ಯ ಸಮಸ್ಯೆಗಳಾದ ಜನ್ಮಾಜಾತ ಹೃದಯ ಸಂಬಂಧಿ ಖಾಯಿಲೆಗಳು (ಸಿಹೆಚ್‌ಡಿ), ಸೀಳು ತುಟಿ, ವಕ್ರಪಾದ, ಮಾನಸಿಕ ಆರೋಗ್ಯ ಸಮಸ್ಯೆಗಳು, ಸೀಳು ಅಂಗಳ, ಕೀವಿ ಕೇಳದಿರುವುದು, ದೈಹಿಕ ನ್ಯೂನ್ಯತೆಗಳಿರುವವರಿಗೆ ಪೀಜಿಯೋಥೆರಪಿ ಸೇರಿದಂತೆ ಮಗುವಿನ ಬೆಳವಣಿಗೆಗೆ ಅಡ್ಡಿಪಡಿಸುವ ಆರೋಗ್ಯ ಸಮಸ್ಯೆಗಳಿಗೆ ರಾಷ್ಟ್ರೀಯ ಬಾಲ್ಯ ಸ್ವಾಸ್ಥ್ಯ ಕಾರ್ಯಕ್ರಮದಡಿ ಮಕ್ಕಳಿಗೆ ಉಚಿತ ಪರೀಕ್ಷೆ, ಅಗತ್ಯವಿರುವ ಚಿಕಿತ್ಸೆ ಹಾಗೂ ಶಸ್ತ್ರಚಿಕಿತ್ಸೆ ಸಹ ಕೈಗೊಳ್ಳಲಾಗುತ್ತಿದ್ದು ಪಾಲಕರು ನೆಮ್ಮದಿಯಿಂದ ತಮ್ಮ ಮುದ್ದು ಮಗುವಿನ ಸಂತಸದ ಕ್ಷಣಗಳನ್ನು ಆಸ್ವಾದಿಸಲು ಸಾಧ್ಯವಾಗುತ್ತಿದೆ ಎಂದು ತಿಳಿಸಿದರು. ಸಿಹೆಚ್‌ಡಿ ಪತ್ತೆಗಾಗಿ ರಾಯಚೂರು ಜಿಲ್ಲೆಯಲ್ಲಿ ಓಪೆಕ್ ಸೂಪರ್ ಸ್ಪೆಶಾಲಿಟಿ ಆಸ್ಪತ್ರೆಯೊಂದಿಗೆ ಇಕೊ ಟೆಸ್ಟ್ ಮಾಡಲು ಒಪ್ಪಂದ ಮಾಡಿಕೊಳ್ಳಲಾಗಿದ್ದು, ಇದರಿಂದ ಸಮಯ ಉಳಿತಾಯವಾಗಲಿದೆ. ಎಲ್ಲ ತಾಲೂಕುಗಳಲ್ಲಿ ಗುರುತಿಸಲ್ಪಟ್ಟ ಸಮಸ್ಯೆ ಇರುವ ಮಕ್ಕಳನ್ನು ಇಲ್ಲಿ ತಪಾಸಣೆ ಮಾಡಲಾಗುವುದು ಎಂದರು. ಜಿಲ್ಲಾ ಆರ್‌ಸಿಹೆಚ್ ಅಧಿಕಾರಿ ಡಾ.ನಂದೀತಾ ಎಮ್ ಎನ್ ಮಾತನಾಡಿ, ಜಿಲ್ಲೆಯಲ್ಲಿ ನವಜಾತ ಶಿಶುಗಳ ಕುಂಠಿತ ಬೆಳವಣಿಗೆಗೆ ಕಾರಣವಾಗುವ ಗಂಭೀರ ಸಮಸ್ಯೆಗಳಿಗೆ ಪಾಲಕರಿಗೆ ಆರ್ಥಿಕ ಹೊರೆಯನ್ನು ತಪ್ಪಿಸಿ ಅಗತ್ಯ ವೈದ್ಯಕೀಯ ಪರೀಕ್ಷೆ, ಚಿಕಿತ್ಸೆ, ಅನುಸರಣೆ ಕೈಗೊಂಡು ನೆಮ್ಮದಿಯ ಭವಿಷ್ಯಕ್ಕೆ ನಿಮ್ಮ ಆರೋಗ್ಯ – ನಮ್ಮ ಆದ್ಯತೆ ಎಂಬ ಧ್ಯೇಯದಂತೆ ಕಾರ್ಯನಿರ್ವಹಿಸಲಾಗುತ್ತಿದೆ ಎಂದು ತಿಳಿಸಿದರು. ಇಂದಿನ ತಪಾಸಣೆ ವೇಳೆ ಡಾ.ಸಂಧ್ಯಾ, ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿ ಈಶ್ವರ ದಾಸಪ್ಪನವರ, ಹಿರಿಯ ಶುಶ್ರೂಷಣಾಧಿಕಾರಿ ಸಲೋಮಿ, ಡಿವೈಹೆಚ್‌ಇಓ ಬಸಯ್ಯ, ಡಿಪಿಎಮ್ ನವೀನ್‌ಕುಮಾರ, ಆರ್‌ಬಿಎಸ್‌ಕೆ ಕನ್ಸಲ್ಟಂಟ್ ಸಿದ್ದಮ್ಮ, ಬಿಹೆಚ್‌ಇಓ ಸರೋಜಾ ಕೆ, ಡಿಇಐಸಿ ತಂಡದ ಸಿಬ್ಬಂದಿ ಉಪಸ್ಥಿತರಿದ್ದರು.

# ಬೇಸಿಗೆ ತರಬೇತಿ ಶಿಬಿರ ಆರಂಭ–ಶಾರದಾ ಇಂಟರ್ನ್ಯಾಷನಲ್ ಇಂಗ್ಲಿಷ್ ಅಕಾಡೆಮಿ




ನೈಜ್ಯ ದೆಸೆ ನ್ಯೂಸ್

**ಸಿಂಧನೂರು: ನಗರದ ಕಲ್ಲೂರು ಕಾಂಪ್ಲೆಕ್ಸ್‌ನಲ್ಲಿರುವ ಸುಪ್ರಸಿದ್ಧ 'ಶಾರದಾ ಇಂಟರ್ನ್ಯಾಷನಲ್ ಇಂಗ್ಲಿಷ್ ಅಕಾಡೆಮಿ' ವತಿಯಿಂದ 2026ನೇ ಸಾಲಿನ ವಿದ್ಯಾರ್ಥಿಗಳಿಗಾಗಿ ವಿಶೇಷ *"ಬೇಸಿಗೆ ತರಬೇತಿ ಶಿಬಿರ"*ವನ್ನು ಆಯೋಜಿಸಲಾಗಿದೆ. ಕಳೆದ 22 ವರ್ಷಗಳಿಂದ ಶಿಕ್ಷಣ ಕ್ಷೇತ್ರದಲ್ಲಿ ಯಶಸ್ವಿಯಾಗಿ ಮುನ್ನುಗ್ಗುತ್ತಿರುವ ಈ ಸಂಸ್ಥೆಯು ಈ ಬಾರಿಯೂ ಗುಣಮಟ್ಟದ ಇಂಗ್ಲಿಷ್ ಕಲಿಕೆಗೆ ಮುನ್ನುಡಿ ಬರೆದಿದೆ.**

**ಕೋರ್ಸ್‌ಗಳು:** ಇಂಗ್ಲಿಷ್ ಫೌಂಡೇಶನ್, ಬೇಸಿಕ್ ಇಂಗ್ಲಿಷ್, ಸ್ಪೋಕನ್ ಇಂಗ್ಲಿಷ್ (ಉಚ್ಚಾರಣೆ ಸೇರಿ), ಇಂಗ್ಲಿಷ್ ರೈಟಿಂಗ್ ಮತ್ತು ರೀಡಿಂಗ್ ತರಗತಿಗಳು ಲಭ್ಯವಿವೆ. **ವಿಶೇಷತೆ:** 6ನೇ ತರಗತಿಯಿಂದ ಮೇಲ್ಪಟ್ಟ ವಿದ್ಯಾರ್ಥಿಗಳಿಗೆ ಸರಾಗವಾಗಿ ಇಂಗ್ಲಿಷ್ ಮಾತನಾಡಲು ವಿಶೇಷ ತರಬೇತಿ ಹಾಗೂ ಖಖ ಕಗಅ ವಿದ್ಯಾರ್ಥಿಗಳಿಗೆ ಪಠ್ಯಕ್ರಮ ಮತ್ತು ಗ್ರಾಮರ್ ತರಗತಿಗಳನ್ನು ನಡೆಸಲಾಗುವುದು. **ಉಚಿತ ಕಿಟ್:** ದಾಖಲಾತಿ ಪಡೆಯುವ ಎಲ್ಲಾ ವಿದ್ಯಾರ್ಥಿಗಳಿಗೆ 'ಪ್ರಿಂಟೆಡ್ ನೋಟ್ಸ್ ಕಿಟ್' ಅನ್ನು ಉಚಿತವಾಗಿ ನೀಡಲಾಗುವುದು

ಬ್ಯಾಚ್‌ಗಳ ವಿವರ : ವಿದ್ಯಾರ್ಥಿಗಳ ಅನುಕೂಲಕ್ಕಾಗಿ ಎರಡು ಬ್ಯಾಚ್‌ಗಳಲ್ಲಿ ಪ್ರವೇಶ ಪ್ರಕ್ರಿಯೆ ಆರಂಭವಾಗಿದೆ:

1. ಮೊದಲ ಬ್ಯಾಚ್: ಏಪ್ರಿಲ್ 01, 2026 ರಿಂದ ಪ್ರಾರಂಭ.
2. ಎರಡನೇ ಬ್ಯಾಚ್: ಏಪ್ರಿಲ್ 08, 2026 ರಿಂದ ಪ್ರಾರಂಭ.

ಈ ಶಿಬಿರದ ಮಾರ್ಗದರ್ಶನವನ್ನು ಜ್ಞಾನಜ್ಯೋತಿ ಸೈನ್ಸ್ ಪದವಿ ಪೂರ್ವ ಕಾಲೇಜಿನ ಇಂಗ್ಲಿಷ್ ಉಪನ್ಯಾಸಕರಾದ ನೂರ್ ಮಹಮ್ಮದ್ (M.A. B.Ed.) ಅವರು ವಹಿಸಲಿದ್ದಾರೆ. ಆಸಕ್ತ ಪೋಷಕರು ಮತ್ತು ವಿದ್ಯಾರ್ಥಿಗಳು ಹೆಚ್ಚಿನ ಮಾಹಿತಿಗಾಗಿ ಹಾಗೂ ಪ್ರವೇಶಕ್ಕಾಗಿ ಈ ಕೆಳಗಿನ ಮೊಬೈಲ್ ಸಂಖ್ಯೆಗಳನ್ನು ಸಂಪರ್ಕಿಸಬಹುದಾಗಿದೆ: 9845738313, 7892152343. **ಸ್ಥಳ:** ಕಲ್ಲೂರು ಕಾಂಪ್ಲೆಕ್ಸ್, ಬಸ್ ನಿಲ್ದಾಣದ ಹತ್ತಿರ, ಬಸವ ವೃತ್ತ, ಸಿಂಧನೂರು.

# ಬೆಸ್ಟ್ ಪಬ್ಲಿಕ್ ಶಾಲೆಯೂ ಶಿಕ್ಷಣ ಜೊತೆಗೆ ಸಮಾಜ ಸೇವಕರನ್ನು ಗೌರವಿಸುವ ಕಾರ್ಯ ಮೆಚ್ಚುವಂಥದ್ದು: ಜಗದೀಶಚಂದ್ರ ಸ್ವಾಮಿ

ನೈಜ್ಯ ದೆಸೆ ನ್ಯೂಸ್

**ಮಸ್ಕಿ: ತಾಲೂಕಿನ ಹಾಲಾಪೂರ ಗ್ರಾಮದ ದಿ ಬೆಸ್ಟ್ ಪಬ್ಲಿಕ್ ಶಾಲೆಯಲ್ಲಿ ಶಾಲಾ ವಾರ್ಷಿಕೋತ್ಸವ, ಅಂತರಾಷ್ಟ್ರೀಯ ಮಹಿಳಾ ದಿನಾಚರಣೆ, ಸಾಧಕರಿಗೆ ಸನ್ಮಾನ, ಸಾಂಸ್ಕೃತಿಕ ಕಾರ್ಯಕ್ರಮದ ಉದ್ಘಾಟನೆಯನ್ನು ಜಂಗಮರಹಳ್ಳಿ ಶ್ರೀ ದಂಡಗುಂಡಪ್ಪ ತಾತ ನೆರವೇರಿಸಿದರು.**

ನಂತರ ಕಾರ್ಯಕ್ರಮದ ಕುರಿತು ಜಗದೀಶಚಂದ್ರ ಸ್ವಾಮಿ ಅಧ್ಯಕ್ಷರು ಪ್ರಾಥಮಿಕ ಕೃಷಿ ಪತ್ತಿನ ಸೌಹಾರ್ದ ಸಹಕಾರಿ ಸಂಘ ಇವರು ಮಾತನಾಡುತ್ತಾ ದಿ ಬೆಸ್ಟ್ ಪಬ್ಲಿಕ್ ಶಾಲೆಯೂ ಸುದೀರ್ಘ 19 ವರ್ಷಗಳನ್ನು ಅತ್ಯುತ್ತಮ ಶಿಕ್ಷಣ ಸಾವಿರಾರು ವಿದ್ಯಾರ್ಥಿಗಳಿಗೆ ನೀಡುವ ಮೂಲಕ ನಮ್ಮ ಭಾಗದಲ್ಲಿ ಉತ್ತಮ ಶಿಕ್ಷಣ ಕೇಂದ್ರವಾಗಿದ್ದು, ಜೊತೆಗೆ




ಸಮಾಜದಲ್ಲಿ ವಿವಿಧ ಕ್ಷೇತ್ರದಲ್ಲಿ ಗಣನೀಯ ಸಾಧನೆ ಮಾಡಿದ ಸಾಧಕರಿಗೆ ಸನ್ಮಾನ ಗೌರವಿಸುವ ಕೆಲಸ ಮಾಡುತ್ತಿರುವುದು ಮತ್ತೊಂದು ಬೆಸ್ಟ್ ಶಿಕ್ಷಣ ಸಂಸ್ಥೆಗೆ ಹೆಮ್ಮೆಯ ಗರಿ ಇದು ಸಮಾಜಕ್ಕೆ ಮಾದರಿಯ ಕೆಲಸ ಎಂದು ಜಗದೀಶಚಂದ್ರ ಸ್ವಾಮಿ ಹೇಳಿದರು.

ನಂತರ ಬಸ್ ಕಂಡಕ್ಟರ್, ಡ್ರೈವರ್, ಅಂಗನವಾಡಿ ಸಹಾಯಕರಿಗೆ, ಪಾಲಕ ಪೋಷಕರಿಗೆ ಸನ್ಮಾನಿಸಿ ಗೌರವಿಸಿದ್ದು ಜನರ ಪ್ರೀತಿಗೆ ಪಾತ್ರವಾದರೂ. ಈ ಸಂದರ್ಭದಲ್ಲಿ ಬೆಸ್ಟ್ ಪಬ್ಲಿಕ್ ಶಾಲೆಯ ಅಧ್ಯಕ್ಷರಾದ ಬಿ ಗದ್ದೆಪ್ಪ , ಏರಿತಾತ ಜಂಗಮರಳ್ಳಿ, ಈರನಗೌಡ ದಳಪತಿ, ಮಂಜುನಾಥಸ್ವಾಮಿ ಅಧ್ಯಕ್ಷರು ತಾಲೂಕ ಖಾಸಗಿ ಶಿಕ್ಷಣ ಲಿಂಗಸೂರು, ಸುಭಾಷ್ ಸಿಂಗ್ ಹಜಾರೆ ಮುಖ್ಯ ಗುರು, ವೆಂಕೋಬ ಪ್ರಾಂಶುಪಾಲರು, ಚೌಡಪ್ಪ ಮಾಜಿ ಅಧ್ಯಕ್ಷರು, ನಾಗೇಶ ಜಂಗಮರಳ್ಳಿ ಪ್ರಾಚಾರ್ಯರು, ಬಸವರಾಜ ನಿಲಯ ಪಾಲಕರು,


ಸಿದ್ದಾರ್ಥ ಪೊ.ಪಾಟೀಲ್, ಉಪಾಧ್ಯಕ್ಷರಾದ ಕೆ ಶೇಖರಪ್ಪ, ಕಾರ್ಯದರ್ಶಿ ಬಿ ಸಿದ್ದು, ಪ್ರೌಢಶಾಲಾ ಮುಖ್ಯಗುರು ರವಿಕುಮಾರ ತೋರಣದಿನ್ನಿ, ಪ್ರಾಥ–'ಮಿಕ ಶಾಲಾ ಮುಖ್ಯಗುರು ಕುಮಾರ ಮಸ್ಕಿ, ಶಿಕ್ಷಕರಾದ ಕೃಷ್ಣಕುಮಾರ, ದೇವೇಂದ್ರಕುಮಾರ, ಕುಪ್ಪಣ್ಣ ಹಾಗೂ ಶಿಕ್ಷಕಿಯರು ಇದ್ದರು. ನಂತರ ವಿದ್ಯಾರ್ಥಿ ವಿದ್ಯಾರ್ಥಿನಿಯರಿಂದ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳು ಜರುಗಿದವು.

# ವೀರನಾಗಮ್ಮ ದೇವಿಯ ದೇವಸ್ಥಾನ ಮೂರ್ತಿ ಪ್ರತಿಷ್ಠಾಪನೆ ಹಾಗೂ ಕಳಸೋತ್ಸವ ಕಾರ್ಯಕ್ರಮ

ನೈಜ್ಯ ದೆಸೆ ನ್ಯೂಸ್

**ಸಮೀಪದ ಗೆಜ್ಜಲಗಟ್ಟಾ ಗ್ರಾಮದ ವೀರನಾಗಮ್ಮ ದೇವಿಯ ದೇವಸ್ಥಾನ ಮೂರ್ತಿ ಪ್ರತಿಷ್ಠಾಪನೆ ಹಾಗೂ ಕಳಸೋತ್ಸವ ಕಾರ್ಯಕ್ರಮ ನೆರವೇರಿಸಲು ಶಾಸಕ ವಜ್ಜಲ್ ಕುಟುಂಬಸ್ಥರು ಸಕಲ ಸಿದ್ಧತೆ ಮಾಡಿಕೊಂಡಿದ್ದಾರೆ.**

ಶುಕ್ರವಾರ (ಫೆ.20) ಬೆಳಿಗ್ಗೆ ಪುಣ್ಯಾಹ ವಾಚನ ಮಹಾಗಣಪತಿಹೋಮ, ಅಧಿವಾಸಹೋಮ, ಪ್ರತಿಷ್ಠಾಂಗತತ್ವ ಹೋಮ ನಡೆಯಲಿದ್ದು 11.33 ಸಮಯಕ್ಕೆ ವೀರನಾಗಮ್ಮ ದೇವಿಯ ಬಿಂಬ ಪ್ರತಿಷ್ಠೆ, ಜೀವಕುಂಭಾಭಿಷೇಕ, ಉಡಿ ತುಂಬುವ ಕಾರ್ಯಕ್ರಮ ಸೇರಿದಂತೆ ವಿವಿದ ಧಾರ್ಮಿಕ ಕಾರ್ಯಕ್ರಮಗಳು ಜರುಗಲಿವೆ. ಬೇಡಿ ಬಂದ ಭಕ್ತರಿಗೆ ವರವ ನೀಡುವ ದೈವಿ ಸ್ವರೂಪಿಯಾಗಿ ಗೆಜ್ಜಲಗಟ್ಟಾ ಗ್ರಾಮದಲ್ಲಿ ಇರುವ



ವೀರನಾಗಮ್ಮ ದೇವಿ ಶಾಸಕ ಮಾನಪ್ಪ ವಜ್ಜಲ್ ಅವರ ಅಣ್ಣ ನಾಗಪ್ಪ ವಜ್ಜಲ್ ಅವರ ಕನಸಿನಲ್ಲಿ ಬಂದು, 'ಗೆಜ್ಜಲಗಟ್ಟಾ ಗ್ರಾಮದಲ್ಲಿ ನೆಲೆಸಿದ್ದೇನೆ ನಿಮ್ಮ ಪೂರ್ವಜರು ಇದೇ ಗ್ರಾಮಸ್ಥರು ಎಂದು ತಿಳಿಸಿದ್ದಾಳೆ' ಎಂದು ವಜ್ಜಲ್ ಕುಟುಂಬದವರು ವೀರಾನಾಗಮ್ಮ ದೇವಸ್ಥಾನ ಕಟ್ಟಲು ಅಂದಿನಿಂದಲೇ ಮುಂದಾಗಿದ್ದಾರೆ. ವಿವಿದ ಗ್ರಾಮಗಳ ಜನ ವೀರನಾಗಮ್ಮ ದೇವಿಯನ್ನು ಪೂಜಿಸುತ್ತಿದ್ದಾರೆ.

ಕಲ್ಲಿನ ರೂಪದಲ್ಲಿ ಉದ್ಭವಗೊಂಡ ದೇವಿಗೆ ಅದೇ ಸ್ಥಳದಲ್ಲಿ ಚಿಕ್ಕ ದೇವಸ್ಥಾನ ಕಟ್ಟಿ ಪೂಜಿಸಲಾಗುತ್ತಿತ್ತು. ಈಗ ಅದೇ ಸ್ಥಳದಲ್ಲಿ ಸಿಡಿಲು, ಮಳೆ, ಭೂಕಂಪನ ಸಂಭವಿಸಿದರೂ ಹಾನಿಯಾಗದಂತೆ ರಾಜ್ಯದ ಅನೇಕ ಕಡೆಗಳಿಂದ ದೊಡ್ಡ ಬಂಡೆಗಲ್ಲುಗಳನ್ನು ತರಿಸಿ 8 ವರ್ಷದಿಂದ ನಿರ್ಮಾಣ ಮಾಡಲಾಗುತ್ತಿದೆ. ಉಡುಪಿ ಜಿಲ್ಲೆಯ ಸಾಲಿಗ್ರಾಮ ಪ್ರಧಾನ ಶಿಲ್ಪಿ ಈಶ್ವರ ದೇಗುಲ ನಿರ್ಮಿಸಿದ್ದಾರೆ. ದೇವಸ್ಥಾನ ಈಗ ಪೂರ್ಣಗೊಂಡಿದ್ದು ಉದ್ಘಾಟನೆಗೆ ಸಿದ್ದವಾಗಿದೆ. ಗ್ರಾಮದಲ್ಲಿ ಕಳೆದ ಐದು ದಿನದಿಂದ ಹಬ್ಬದ ವಾತಾವರಣ ನಿರ್ಮಾಣಗೊಂಡಿದೆ. ಸಂಜೆ ಧರ್ಮಸಭೆ, ಕಲಾತಂಡಗಳಿಂದ ಸಂಗೀತ ಕಾರ್ಯಕ್ರಮ, ಹಾಸ್ಯಸಂಜೆ, ನೃತ್ಯ ಸೇರಿದಂತೆ ವಿವಿಧ ಕಾರ್ಯಕ್ರಮಗಳು ನಡೆದಿವೆ. ಇಮ್ಮಡಿ ಸಿದ್ದರಾಮೇಶ್ವರ ಸ್ವಾಮಿಗಳು ಸಾನ್ನಿಧ್ಯ ವಹಿಸಲಿದ್ದಾರೆ.

ಕೇಂದ್ರದ ಸಚಿವ ಗಜೇಂದ್ರಸಿಂಗ್ ಶೇಖಾವತ್ ಕಾರ್ಯಕ್ರಮದ ಉದ್ಘಾಟಿಸಲಿದ್ದು ಕೇಂದ್ರದ ಪ್ರಹ್ಲಾದ್ ಜೋಷಿ, ಬಿಜೆಪಿ ರಾಜ್ಯಧ್ಯಕ್ಷ ಬಿ.ವೈ.ವಿಜಯೇಂದ್ರ, ಬಿಜೆಪಿ ನಾಯಕರಾದ ಆರ್.ಅಶೋಕ, ಚಲುವಾದಿ ನಾರಾಯಣಸ್ವಾಮಿ, ಶ್ರೀರಾಮುಲು ಸೇರಿದಂತೆ ಅನೇಕ ಗಣ್ಯರು ಕಾರ್ಯಕ್ರಮಕ್ಕೆ ಆಗಮಿಸಲಿದ್ದಾರೆ. ಗೆಜ್ಜಲಗಟ್ಟಾ ಗ್ರಾಮದ ವೀರನಾಗಮ್ಮ ದೇವಿ ದೇಗುಲದ ಮುಖ್ಯಧ್ವಾರ ಕರಿಯಪ್ಪ ವಜ್ಜಲ್ ಗುತ್ತಿಗೆದಾರಗೆಜ್ಜಲಗಟ್ಟಾದಲ್ಲಿ ನಮ್ಮ ಮನೆಯ ಆರಾಧ್ಯ ದೇವಿ ನೆಲೆಸಿದ್ದರ ಬಗ್ಗೆ ವಿಚಾರಿಸಿದಾಗ ನಮ್ಮ ಪೂರ್ವಜರು ಇದ್ದ ಸ್ಥಳವೇ ಗೆಜ್ಜಲಗಟ್ಟಾ ಎಂದು ಗೊತ್ತಾಯಿತು. ಅದಕ್ಕಾಗಿ ವೀರನಾಗಮ್ಮ ದೇವಿಯ ದೇವಸ್ಥಾನ ನಿರ್ಮಾಣ ಮಾಡಲಾಗಿದೆ. ಈ ಭಾಗದ ಬಹುದೊಡ್ಡ ದೇವಸ್ಥಾನ ಇದಾಗಿದ್ದು ಬೇಡಿ ಬಂದ ಭಕ್ತರಿಗೆ ವರವ ಕೊಡುವ ದೇವಿಯಾಗಿ ಈ ನೆಲದಲ್ಲಿ ನೆಲೆಸಿದ್ದಾಳೆ.

# ದೇವದುರ್ಗ ತಾಲೂಕಿನ ಜಾಲಹಳ್ಳಿ ಗ್ರಾಮ ಪಂಚಾಯತಿಯಲ್ಲಿ 2025–2026ನೇ ಸಾಲಿನ 15ನೇ ಹಣಕಾಸಿನ ನೆರವು ಬಿಡುಗಡೆಯಾಗಿಲ್ಲವೆಂದು ಆರೋಪ

ನೈಜ್ಯ ದೆಸೆ ನ್ಯೂಸ್

**ರಾಯಚೂರು: ಜಿಲ್ಲೆಯ ದೇವದುರ್ಗ ತಾಲೂಕಿನ ಜಾಲಹಳ್ಳಿ ಗ್ರಾಮ ಪಂಚಾಯತಿಯಲ್ಲಿ 2025–2026ನೇ ಸಾಲಿನ 15ನೇ ಹಣಕಾಸಿನ ನೆರವು ಬಿಡುಗಡೆಯಾಗಿಲ್ಲವೆಂದು ಆಡಳಿತ ನಡೆಸುತ್ತಿರುವ ಪಂಚಾಯತ್ ಅಧ್ಯಕ್ಷರು, ಉಪಾಧ್ಯಕ್ಷರು ಹಾಗೂ ಸದಸ್ಯರು ಆರೋಪಿಸಿದ್ದಾರೆ. ದಿನಾಂಕ 20–02–2026 ರಂದು ದೇವದುರ್ಗ ತಾಲೂಕಿನ ಜಾಲಹಳ್ಳಿ ಗ್ರಾಮ ಪಂಚಾಯತ್ ಕಚೇರಿಯಲ್ಲಿ ಪತ್ರಿಕಾಗೋಷ್ಠಿ ನಡೆಸಿ ಮಾತನಾಡಿದ ಅಧ್ಯಕ್ಷರಾದ ವಿಜಯಲಕ್ಷ್ಮಿ ವೆಂಕೋಬ ತೋಟ ಅವರು, "ಕರ್ನಾಟಕ ಸರ್ಕಾರದಿಂದ ಬರಬೇಕಾದ 15ನೇ ಹಣಕಾಸಿನ ಅನುದಾನ ಇನ್ನೂ ಬಿಡುಗಡೆಯಾಗಿಲ್ಲ.**

ಜೊತೆಗೆ ಈ ವರ್ಷದ ಃಔಅ ಕೂಲಿಕಾರರ



ಕೆಲಸ ಹಾಗೂ ಸಾಮಗ್ರಿ ವೆಚ್ಚದ ಅಂದಾಜು 8 ಕೋಟಿ 80 ಲಕ್ಷ ರೂಪಾಯಿ ಬಿಡುಗಡೆಯಾಗದೆ ಇರುವುದರಿಂದ ಪಂಚಾಯತ್ ಅಭಿವೃದ್ಧಿ ಕಾರ್ಯಗಳು ಕುಂಠಿತಗೊಂಡಿವೆ" ಎಂದು ಆರೋಪಿಸಿದರು. ,"ಜಿಲ್ಲಾ ಪಂಚಾಯತ್ ಮತ್ತು ತಾಲೂಕು ಪಂಚಾಯತ್ ಅಧಿಕಾರಿಗಳ ನಿರ್ಲಕ್ಷದಿಂದ ಅನುದಾನ ವಿಳಂಬವಾಗುತ್ತಿದೆ. ಈಗಾಗಲೇ ಹಲವು ಬಾರಿ ಮನವಿ ಸಲ್ಲಿಸಿದರೂ ಸ್ಪಂದನೆ ಸಿಕ್ಕಿಲ್ಲ" ಎಂದರು. ಗ್ರಾಮ ಪಂಚಾಯತ್ ಸದಸ್ಯರಾದ ಅಬ್ದುಲ್ ರೆಹಮಾನ್ ಖುರೇಶ ಅವರು, "ದೊಡ್ಡ ಪಂಚಾಯತ್ ಆಗಿರುವ ಜಾಲಹಳ್ಳಿಯಲ್ಲಿ ಪ್ರಸ್ತುತ ನಿಧಿ–1 ಹಾಗೂ ನಿಧಿ–2 ಮೂಲಕ ಮಾತ್ರ ಕಾರ್ಯ ನಡೆಯುತ್ತಿದೆ. ಸಿಬ್ಬಂದಿಗಳ ವೇತನಕ್ಕೂ ತೊಂದರೆ ಉಂಟಾಗಿದೆ. ರೈತರ ಹೊಲಗಳ ನಾಲಾ ಅಭಿವೃದ್ಧಿ ಕಾಮಗಾರಿಗಳಿಗೆ ಮನರೇಗಾ ಹೆಸರಿನಲ್ಲಿ ವಿಳಂಬ ಮಾಡಲಾಗುತ್ತಿದೆ" ಎಂದು ದೂರಿದರು.

ಸದಸ್ಯರಾದ ಬಸವರಾಜ್ ಗೋಪಾಲಪುರ ಅವರು, "ಗ್ರಾಮ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು ಕಾಮಗಾರಿಗಳಿಗೆ ಸರಿಯಾಗಿ ಸ್ಪಂದಿಸುತ್ತಿಲ್ಲ. ಅವರನ್ನು ಬದಲಾವಣೆ ಮಾಡುವಂತೆ ರಾಯಚೂರು ಜಿಲ್ಲಾ ಪಂಚಾಯತ್ ಮತ್ತು ದೇವದುರ್ಗ ತಾಲೂಕು ಪಂಚಾಯತ್ ಅಧಿಕಾರಿಗಳಿಗೆ ಮನವಿ ಸಲ್ಲಿಸಿದ್ದೇವೆ. ಆದರೆ ಇನ್ನೂ ಯಾವುದೇ ಕ್ರಮ ಕೈಗೊಂಡಿಲ್ಲ" ಎಂದು ಹೇಳಿದರು. ಇದಲ್ಲದೆ, ರಾಜ್ಯ ಹೆದ್ದಾರಿಯಲ್ಲಿ ಹಂಪ್ಸ್ ಹಾಕುವ ಕುರಿತು ತರಾವು ಪಾಸ್ ಮಾಡಿದರೂ Public Works Department ಅಧಿಕಾರಿಗಳು ಸ್ಪಂದಿಸಿಲ್ಲವೆಂದು ಅವರು ಆಕ್ಷೇಪಿಸಿದರು. ಮಾರ್ಚ್ ತಿಂಗಳು ಸಮೀಪಿಸುತ್ತಿರುವ ಹಿನ್ನೆಲೆಯಲ್ಲಿರೈತರ ಹೊಲಗಳ ನಾಲಾ ಅಭಿವೃದ್ಧಿ ಈ ವರ್ಷದ ಃಔಅ ಕೂಲಿಕಾರರ ಕೆಲಸ ಹಾಗೂ ಸಾಮಗ್ರಿಕಾಮಗಾರಿಗಳಿಗೆ ಮನರೇಗಾ ಪ್ರಸ್ತುತ ಸಾಲಿನ ಹಣ ಬಿಡುಗಡೆ ಮಾಡದಿದ್ದರೆ ಅಂದಾಜು 8.80 ಕೋಟಿ ರೂಪಾಯಿ ಮೌಲ್ಯದ ಕಾಮಗಾರಿಗಳಿಗೆ ನಷ್ಟ ಉಂಟಾಗುವ ಸಾಧ್ಯತೆ ಇದೆ ಎಂದು ಎಚ್ಚರಿಸಿದರು.

ಜಿಲ್ಲಾ ಪಂಚಾಯತ್ ಹಾಗೂ ತಾಲೂಕು ಪಂಚಾಯತ್ ಅಧಿಕಾರಿಗಳು ಜಾಲಹಳ್ಳಿ ಗ್ರಾಮ ಪಂಚಾಯತಿನ ಪ್ರಸ್ತುತ ವರ್ಷದ 15ನೇ ಹಣಕಾಸು ಹಾಗೂ ಹಣ ಬಿಡುಗಡೆ ಮಾಡಬೇಕೆಂದು ಒತ್ತಾಯಿಸಿದರು ಈ ಪತ್ರಿಕಾಗೋಷ್ಠಿಯಲ್ಲಿ ಅಧ್ಯಕ್ಷ ವಿಜಯಲಕ್ಷ್ಮಿ ವೆಂಕೋಬ ತೋಟ, ಉಪಾಧ್ಯಕ್ಷ ವೀರೇಶ್ ಅರ್ಕೇರಿ ಹಾಗೂ ಸದಸ್ಯರಾದ ಮಲ್ಲಪ್ಪ ಸೌದ್ರಿ, ಸರ್ಬಣ್ಣ ಹಂಪರಗುಂದಿ, ಬಸವರಾಜ್ ಗೋಪಾಲಪುರ ಮತ್ತು ಅಬ್ದುಲ್ ರೆಹಮಾನ್ ಉಪಸ್ಥಿತರಿದ್ದರು.

**ವರದಿ: ಖಾಜಾಹುಸೇನ್ ಬಾಬಾ, ಜಾಲಹಳ್ಳಿ**

## ನೇಮಕಾತಿ ಪ್ರಕಟಣೆ

KPSC ನೇಮಕಾತಿ 2026–ವಿವಿಧ ಇಲಾಖಾ ಪರೀಕ್ಷಾ ಹುದ್ದೆಗಳಿಗೆ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಿ KPSC ನೇಮಕಾತಿ 2026: ವಿವಿಧ ಇಲಾಖಾ ಪರೀಕ್ಷಾ ಹುದ್ದೆಗಳಿಗೆ ಅರ್ಜಿ ಸಲ್ಲಿಸಿ. ಕರ್ನಾಟಕ ಲೋಕಸೇವಾ ಆಯೋಗವು ಫೆಬ್ರವರಿ 2026 ರ KPSC ಅಧಿಕೃತ ಅಧಿಸೂಚನೆಯ ಮೂಲಕ ಇಲಾಖಾ ಪರೀಕ್ಷಾ ಹುದ್ದೆಗಳನ್ನು ಭರ್ತಿ ಮಾಡಲು ಅರ್ಹ ಮತ್ತು ಆಸಕ್ತ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಿದೆ. ಕರ್ನಾಟಕ ಸರ್ಕಾರದಲ್ಲಿ ವೃತ್ತಿಜೀವನವನ್ನು ಹುಡುಕುತ್ತಿರುವ ಉದ್ಯೋಗಾಕಾಂಕ್ಷಿಗಳು ಈ ಅವಕಾಶವನ್ನು ಬಳಸಿಕೊಳ್ಳಬಹುದು. ಆಸಕ್ತ ಅಭ್ಯರ್ಥಿಗಳು 21–ಮಾರ್ಚ್–2026 ರಂದು ಅಥವಾ ಮೊದಲು ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಬಹುದು. ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಲು ಪ್ರಾರಂಭ ದಿನಾಂಕ: 21–02–2026 ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 21–ಮಾರ್ಚ್–2026 ಅರ್ಜಿ ಶುಲ್ಕವನ್ನು ಪಾವತಿಸಲು ಕೊನೆಯ ದಿನಾಂಕ: 23–03–2026 ಮೊದಲ ಹಂತದ ಪರೀಕ್ಷೆಯ ದಿನಾಂಕ: 09ನೇ ಮೇ–2026 ರಿಂದ 11ನೇ ಮೇ–2026 ಎರಡನೇ ಹಂತದ ಪರೀಕ್ಷೆಯ ದಿನಾಂಕ: 13ನೇ ಮೇ–2026 ರಿಂದ 22ನೇ ಮೇ–2026 (17ನೇ ಮೇ–2026 ಹೊರತುಪಡಿಸಿ) ಮೂರನೇ ಹಂತದ ಪರೀಕ್ಷೆಯ ದಿನಾಂಕ: 25ನೇ ಮೇ–2026 ರಿಂದ 31ನೇ ಮೇ–2026 (28ನೇ ಮೇ–2026 ಹೊರತುಪಡಿಸಿ) ಅಧಿಕೃತ ವೆಬ್‌ಸೈಟ್: kpsc.kar.nic.in

# ಮಕ್ಕಳಲ್ಲಿ ಮಾನವೀಯ ಮೌಲ್ಯಗಳನ್ನು ಬೆಳೆಸಿ: ಸಾಹಿತಿ ಹಂಚಲಿ

**ನೈಜ್ಯ ದೆಸೆ ನ್ಯೂಸ್**

**ತಾಳಿಕೋಟಿ: ಇತ್ತೀಚಿನ ದಿನಗಳಲ್ಲಿ ಮಕ್ಕಳಲ್ಲಿ ಸಂಸ್ಕಾರ ಹಾಗೂ ಮಾನವೀಯ ಮೌಲ್ಯಗಳು ಕಡಿಮೆ ಆಗುತ್ತಿವೆ ಇದು ಕಳವಳಕಾರಿ ಸಂಗತಿಯಾಗಿದೆ ಇದರ ಕುರಿತು ಎಲ್ಲರೂ ಚಿಂತಿಸುವ ಅಗತ್ಯ ಇದೆ ಎಂದು ಸಾಹಿತಿ ಅಶೋಕ ಹಂಚಲಿ ಹೇಳಿದರು.**



ತಾಲೂಕಿನ ಚಬನೂರ ಕ್ರಾಸ್ ನಲ್ಲಿರುವ ಶ್ರೀ ಕರಬಸಪ್ಪಗೌಡ ಹಯ್ಯಾಳ ಗ್ರಾಮೀಣ ವಿದ್ಯಾವರ್ಧಕ ಸಂಘ ಇದರ ಅಡಿಯಲ್ಲಿ ನಡೆಯುತ್ತಿರುವ ಶ್ರೀ ತಾಯಮ್ಮ ಆಂಗ್ಲ ಮಾಧ್ಯಮ ಶಾಲೆಯ ವಾರ್ಷಿಕ ಸ್ನೇಹ ಸಮ್ಮೇಳನದಲ್ಲಿ ಅವರು ಮಾತನಾಡಿದರು. ಇವತ್ತು ಮಕ್ಕಳಿಗೆ ಗುಣಮಟ್ಟದ ಶಿಕ್ಷಣದೊಂದಿಗೆ ಒಳ್ಳೆಯ ಸಂಸ್ಕಾರಗಳನ್ನು ಕೊಡಬೇಕಾಗಿದೆ ಇದರಲ್ಲಿ ಪಾಲಕರ ಜವಾಬ್ದಾರಿಯೂ ಇದೆ ಅವರನ್ನು ಮೊಬೈಲ್ ದಾಸರಾಗದಂತೆ ನೋಡಿಕೊಳ್ಳಲು ಸ್ವತಃ ಪಾಲಕರು ಅವರ ಮುಂದೆ ಮೊಬೈಲ್ ಬಳಕೆ ಕಡಿಮೆ ಮಾಡಬೇಕು ಮಗು ಹೆತ್ತವರನ್ನು ಅನುಸರಿಸುತ್ತದೆ ಎಲ್ಲರೂ ಪೂರಕವಾಗಿ ಕೆಲಸ ಮಾಡಿದಾಗ ಮಾತ್ರ ಅವರ ಭವಿಷ್ಯವನ್ನು ನಿರ್ಮಾಣ ಮಾಡಲು ಸಾಧ್ಯ.

ತಾಯಮ್ಮ ಸಂಸ್ಥೆ ಕೇವಲ ಮೂರು ವರ್ಷಗಳ ಅವಧಿಯಲ್ಲಿ ಗಮನಾರ್ಹವಾದ ಸಾಧನೆ ಮಾಡಿದೆ ಇದಕ್ಕೆ ನಿಮ್ಮ ಸಹಕಾರವೇ ಕಾರಣ ಅದು ಮುಂದೆಯೂ ಇದೆ ರೀತಿಯಾಗಿರಲಿ ಎಂದರು.ಸಾಸನೂರ ಗ್ರಾಪಂ ಅಭಿವೃದ್ಧಿ ಅಧಿಕಾರಿ ಪರಶುರಾಮ ಕಸನಕ್ಕಿ ಮಾತನಾಡಿ ವಿದ್ಯಾರ್ಥಿಗಳು ತಮ್ಮ ಬದುಕಿಗೆ ಶ್ರೇಷ್ಠ ಗುರಿಯನ್ನು ಇಟ್ಟುಕೊಂಡು ಕಠಿಣ ಪರಿಶ್ರಮದ ಮೂಲಕ ಅದನ್ನು ಸಾಧಿಸಲು ಪ್ರಯತ್ನಿಸಬೇಕು. ತಾಯಮ್ಮ ಸಂಸ್ಥೆ ಈ ಭಾಗದ ಮಾದರಿ ಸಂಸ್ಥೆಯಾಗಿದೆ ಎಂದರು. ಸಮಾರಂಭದ ಸಾನಿಧ್ಯ ವಹಿಸಿದ್ದ ಕೊಕಟನೂರ ಗದ್ದಗಿ ಹಿರೇಮಠದ ಮ.ನಿ.ಪ್ರ. ಶ್ರೀ ಮಡಿವಾಳೇಶ್ವರ ಶಿವಾಚಾರ್ಯರು ಆಶೀರ್ವಚನ ನೀಡಿದರು.ಪೂಜ್ಯ ಕರಬಸಯ್ಯ ಸಿ.ಹಿರೇಮಠ (ಮುರಡಿ) ಸಮ್ಮುಖ ವಹಿಸಿದ್ದರು.

ಇದೇ ಸಂದರ್ಭದಲ್ಲಿ ವಿವಿಧ ಕ್ರೀಡೆ ಹಾಗೂ ಸ್ಪರ್ಧೆಗಳಲ್ಲಿ ಭಾಗವಹಿಸಿ ಉತ್ತಮ ಸಾಧನೆ ತೋರಿದ ಮಕ್ಕಳನ್ನು ಸನ್ಮಾನಿಸಿ ಪ್ರೋತ್ಸಾಹಿಸಲಾಯಿತು. ವೇದಿಕೆ ಕಾರ್ಯಕ್ರಮ ನಂತರ ಸಂಸ್ಕೃತಿಕ ಕಾರ್ಯಕ್ರಮಗಳು ಜರುಗಿದವು. ಈ ಸಂದರ್ಭದಲ್ಲಿ ಗಣ್ಯರಾದ ಬಸಯ್ಯ ಹಿರೇಮಠ, ಹಣಮಂತ್ರಾಯ ಚೌದ್ರಿ, ಚಂದ್ರಶೇಖರ ಕನಕರೆಡ್ಡಿ, ರಾಮಲಿಂಗಪ್ಪ ದೇಸಾಯಿ, ಪ್ರದೀಪ ದೇಸಾಯಿ, ಸಿದ್ದಲಿಂಗ ಗುಂಡಾಪುರ,ಕು. ತಾಯಮ್ಮ ಹಿರೇಮಠ, ವೆಂಕಟೇಶ ತಾಳಪಲ್ಲೆ,ಎಂ.ಡಿ.ಬಳಗಾರ, ರಾಮಚಂದ್ರಪ್ಪ ದೇಸಾಯಿ, ಮಶಾಕಸಾಬ ದೊಡಮನಿ, ಶಿವಲೀಲಾ ಹಿರೇಮಠ, ಬಸನಗೌಡ ಬಿಂಜಲಭಾವಿ, ಎಸ್.ಪಿ.ಹಿಪ್ಪರಗಿ, ಶಿವಶಂಕರಗೌಡ ಯಾದಗಿರಿ, ನಾಗು ದೇಸಾಯಿ, ಸಂಸ್ಥೆಯ ಅಧ್ಯಕ್ಷ ಶರಣಯ್ಯ ಹಿರೇಮಠ, ಉಪಾಧ್ಯಕ್ಷ ಶಶಿಧರ ಹಯ್ಯಾಳ,ಮು.ಗು.ಬಿ. ಎನ್. ಸಿದ್ದರೆಡ್ಡಿ, ಕಾರ್ಯದರ್ಶಿ ಮಡಿವಾಳಪ್ಪ ದೇಸಾಯಿ, ಆಡಳಿತ ಮಂಡಳಿ ನಿರ್ದೇಶಕರು, ಶಿಕ್ಷಕ ವರ್ಗ,ಪಾಲಕರು ಹಾಗೂ ವಿದ್ಯಾರ್ಥಿಗಳು ಇದ್ದರು. ಕುಮಾರಿ ಲಕ್ಷ್ಮಿ ಪ್ರಾರ್ಥಿಸಿದರು. ಶಿಕ್ಷಕ ನಿಸಾರ್ ಮೂಕಿಹಾಳ ಸ್ವಾಗತಿಸಿದರು.ಬಸವರಾಜ್ ಸಿದರೆಡ್ಡಿ ವರದಿ ವಾಚಿಸಿದರು. ನಬಿಲಾಲ ಚಂದನಕೇರಿ ವಂದಿಸಿದರು.

## ಮೂರ್ಛೆರೋಗ ಅಥವಾ ಅಪಸ್ಮಾರ–ತಪ್ಪು ಕಲ್ಪನೆಗಳನ್ನು ಬೇಡ, ಸಂಪೂರ್ಣ ಗುಣಮುಖವಾಗುವುದು–ಡಾ ನಾಗಭೂಷಣ ಹೆಸರೂರು.

**ನೈಜ್ಯ ದೆಸೆ ನ್ಯೂಸ್**

**ರಾಯಚೂರು: ಅಪಸ್ಮಾರ ಅಥವಾ ಮೂರ್ಛೆ ರೋಗದ ಬಗ್ಗೆ ಸಮಾಜದಲ್ಲಿರುವ ತಪ್ಪು ಕಲ್ಪನೆಗಳನ್ನು ಹೋಗಲಾಡಿಸುವುದು, ರೋಗಿಗಳಿಗೆ ಸೂಕ್ತ ಚಿಕಿತ್ಸೆ ಸಿಗುವಂತೆ ಮಾಡುವುದು ಮತ್ತು ಅವರ ಹಕ್ಕುಗಳ ಬಗ್ಗೆ ಜಾಗೃತಿ ಮೂಡಿಸುವುದು ನಮ್ಮೆಲ್ಲರ ಕರ್ತವ್ಯವಾಗಿದೆ ಎಂದು ಕಬೀ ಕಾರ್ಯಕ್ರಮದ ನರರೋಗ ತಜ್ಞರು, –ಡಾ ನಾಗಭೂಷಣ ಹೆಸರೂರು ತಿಳಿಸಿದರು.**



ಜಿಲ್ಲಾಡಳಿತ, ಜಿಲ್ಲಾ ಪಂಚಾಯತ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಜಿಲ್ಲಾ ಮಾನಸಿಕ ಆರೋಗ್ಯ ಕಾರ್ಯಕ್ರಮ ವಿಭಾಗ, ಕರ್ನಾಟಕ ಮೆದುಳು ಆರೋಗ್ಯ ಉಪಕ್ರಮ ರಿಮ್ಸ್ ರಾಯಚೂರು ಇವರ ಮೂಲಕ ನಗರದ ಸಿಯಾತಲಾಬ್ ಸರ್ಕಾರಿ ಪ್ರೌಢಶಾಲೆಯಲ್ಲಿ ಅಂತರಾಷ್ಟ್ರೀಯ ಮೂರ್ಛರೋಗ ದಿನ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡುತ್ತಾ, ಮೂರ್ಛರೋಗದ ಬಗ್ಗೆ ಸಮಾಜದಲ್ಲಿರುವ ತಪ್ಪು ನಂಬಿಕೆ, ಕಳಂಕವನ್ನು ದೂರ ಮಾಡುವುದು ಇದರ ಉದ್ದೇಶವಾಗಿದೆ. ಅಪಸ್ಮಾರವು ಉಂಟಾಗಲು ಪಾರ್ಶ್ವವಾಯು, ಮೆದುಳಿನ ಗಡ್ಡೆ, ಮೆದುಳಿನ ಸೋಂಕು, ತಲೆಗೆ ಪೆಟ್ಟು, ಮೆದುಳಿಗೆ ಆಮ್ಲಜನಕದ ಕಡಿಮೆ ಪೂರೈಕೆ, ಕೆಲವು ಅನುವಂಶೀಯ ಅಸ್ವಸ್ಥತೆಗಳು, ಹಲವು ರೋಗಿಗಳಲ್ಲಿ ಅಪಸ್ಮಾರದ ನಿಖರವಾದ ಕಾರಣ ತಿಳಿದಿಲ್ಲ, ಅಲ್ಲದೆ ಇದು ಸಾಮಾಜಿಕವಾಗಿಯೂ ರೋಗಿಗಳ ಮೇಲ ಪರಿಣಾಮ ಬೀರುತ್ತದೆ. ವಿಶ್ವದಾದ್ಯಂತ ಸುಮಾರು 50 ಮಿಲಿಯನ್ ಜನರು ಈ ಸಮಸ್ಯೆಯಿಂದ ಬಳಲುತ್ತಿದ್ದಾರೆ. ಚಿಕಿತ್ಸೆ ಸರಿಯಾದ ಔಷಧೋಪಚಾರ ಮತ್ತು ವೈದ್ಯಕೀಯ ಸಲಹೆಯಿಂದ ಶೇ.70 ರಷ್ಟು ಪ್ರಕರಣಗಳನ್ನು ನಿಯಂತ್ರಿಸಬಹುದು ಮೂಢನಂಬಿಕೆ ಅಪಸ್ಮಾರವು ಯಾವುದೇ ಶಾಪ ಅಥವಾ ದೈವಿಕ ಕೊಪವಲ್ಲ, ಇದೊಂದು ನರವೈಜ್ಞಾನಿಕ ಕಾಯಿಲೆಯಾಗಿದೆ, ಪ್ರಸ್ತುತ ರಿಮ್ಸ್ ಆಸ್ಪತ್ರೆಯ 'ಬಿ' ಬ್ಲಾಕ್‌ನ ಕೊಠಡಿ ಸಂಖ್ಯೆ 16 ರಲ್ಲಿ ಸೇವೆ ಲಭ್ಯವಿದೆ ಎಂದರು. ಶಾಲೆಯ ಮುಖ್ಯೋಪಾಧ್ಯಾಯರಾದ ವಿ.ಕೆ. ಜೋಶಿ ಅಧ್ಯಕ್ಷತೆ ವಹಿಸಿದ್ದರು. ಪ್ರತಿಜ್ಞೆ ಸ್ವೀಕಾರ: ಮೂರ್ಛೆ ರೋಗ ಜಾಗೃತಿಯ ಪ್ರತಿಜ್ಞೆ ಸ್ವೀಕರಿಸಲಾಯಿತು. ಈ ಸಂದರ್ಭದಲ್ಲಿ ಸಿಯಾತಲಾಬ್ ನಗರ ಪ್ರಾಥಮಿಕ ಆರೋಗ್ಯ ಕೇಂದ್ರದ ಡಾ ಗುಂಡಮ್ಮ, ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿ ಈಶ್ವರ ಹೆಚ್ ದಾಸಪ್ಪನವರ, ಉಪ ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿ ಬಸಯ್ಯ, ಕಬೀ ಕಾರ್ಯಕ್ರಮ ಜಿಲ್ಲಾ ಸಂಯೋಜಕರು ರೋಹಿತ್‌ಗೌಡ, ಕ್ಷೇತ್ರ ಆರೋಗ್ಯ ಶಿಕ್ಷಣಾಧಿಕಾರಿ ಸರೋಜಾ ಕೆ, ಪ್ರಾಥಮಿಕ ಆರೋಗ್ಯ ಸುರಕ್ಷಣಾಧಿಕಾರಿ ಅನಿತಾ, ಆರೋಗ್ಯ ನಿರೀಕ್ಷಣಾಧಿಕಾರಿ ಬಸವರಾಜ, ಮನಶಾಸ್ತ್ರಜ್ಞ, ಅರುಣ್‌ಕುಮಾರ್ ಕುಲಕರ್ಣಿ, ಕಬಿ ಕಾರ್ಯಕ್ರಮದ ಪೋಲ್‌ರಾಜ್, ಅಲಿಮ್‌ಬೇಗ್, ಶಾಲೆಯ ಶಿಕ್ಷಕರು ಹಾಗೂ ಆಶಾ ಕಾರ್ಯಕರ್ತೆಯರು ಸೇರಿದಂತೆ ವಿದ್ಯಾರ್ಥಿಗಳು ಭಾಗವಹಿಸಿದ್ದರು.

# ಬಹುಗಾತ್ರದ ವಾಹನಗಳ ಓಡಾಟಕ್ಕೆ ಬ್ರೇಕ್ ಹಾಕಲು ಕರವೇ ಅಧ್ಯಕ್ಷ ಆರ್. ಕೆ. ನಾಯಕ ಒತ್ತಾಯ



**ನೈಜ್ಯ ದೆಸೆ ನ್ಯೂಸ್**

**ಮಸ್ಕಿ: ತಾಲೂಕಿನ ಮೆದಿಕಿನಾಳ ಮತ್ತು ತಲೇಖಾನ ಗ್ರಾ.ಪಂ ವ್ಯಾಪ್ತಿಯಲ್ಲಿ ಪವನ್ ವಿದ್ಯುತ್ ಶಕ್ತಿ ಪಂಕಗಳನ್ನು ತುಂಬಿಕೊಂಡು ಓಡಾಡುತ್ತಿರುವ ಬಹುಗಾತ್ರದ ವಾಹನಗಳ ಓಡಾಟಕ್ಕೆ ಬ್ರೇಕ್ ಹಾಕಬೇಕೆಂದು ಕರ್ನಾಟಕ ರಕ್ಷಣಾ ವೇದಿಕೆ (ಶಿವರಾಮೆಗೌಡ ಬಣ) ದಿಂದ ತಹಸೀಲ್ದಾರ್ ಮಂಜುನಾಥ ಭೋಗಾವತಿಗೆ ಮನವಿ ಸಲ್ಲಿಸುವ ಮೂಲಕ ಒತ್ತಾಯಿಸಿದ್ದಾರೆ.**

ನಂತರ ತಾಲೂಕಾಧ್ಯಕ್ಷ ಆರ್. ಕೆ.ನಾಯಕ ಮಾತನಾಡಿ, ಮೆದಿಕಿನಾಳ ಗ್ರಾಮದಿಂದ ತಲೇಖಾನ, ದೇಸಾಯಿ ಬೋಗಾಪೂರ, ಯರದೊಡ್ಡಿ, ಹೊಕ್ರಾಣಿ ಇನ್ನಿತರ ಗ್ರಾಮಗಳಿಗೆ ಸಂಪರ್ಕ ಕಲ್ಪಿಸುವ ರಸ್ತೆಗಳಲ್ಲಿ ಪವನ ವಿದ್ಯುತ ಶಕ್ತಿಗೆ ಸಂಬಂಧಪಟ್ಟ ಪಂಕಗಳ ಬಿಡಿ ಭಾಗಗಳನ್ನು ತುಂಬಿಕೊಂಡು ಟಾರಸ್ ಲಾರಿಗಳು ಮತ್ತು ಇದಕ್ಕೆ ಸಂಬಂಧಪಟ್ಟಂತೆ ಮರಂ ಹೊಡೆಯುವ ಟಿಪ್ಪರಗಳ ಹಾವಳಿಯಿಂದ ರಸ್ತೆಗಳು ಸಂಪೂರ್ಣ ಹಾಳಾಗಿವೆ. ರಸ್ತೆಗಳ ಮದ್ಯದಲ್ಲಿ ದೊಡ್ಡ ಪ್ರಮಾಣದ ಗುಂಡಿಗಳು ಬಿದ್ದಿವೆ. ಇದ–ರಿಂದ ಗ್ರಾಮೀಣ ಭಾಗದ ರಸ್ತೆ ಹಾಳಾಗಿದ್ದು, ಜನ ಸಾಮಾನ್ಯರು, ಶಾಲಾ ಮಕ್ಕಳು ಓಡಾಡಲು ಸಮಸ್ಯೆಯಾಗಿದೆ. ರಸ್ತೆಗಳಲ್ಲಿ ಗುಂಡಿಗಳು ಬಿದ್ದದ್ದರಿಂದ ರಸ್ತೆ ಅಪಘಾತಗಳಾಗಿವೆ. ತುರ್ತು ಸಂದರ್ಭದಲ್ಲಿ ರೋಗಿಗಳನ್ನು ಕರೆದೊಯ್ಯಲು ಆ?ಯಂಬುಲೆನ್ಸ್ ಕೂಡ ಸಮಯಕ್ಕೆ ಸರಿಯಾಗಿ ಬರಲಾಗುತ್ತಿಲ್ಲ.

ರಸ್ತೆಗಳಲ್ಲಿ ಗುಂಡಿಗಳು ದೊಡ್ಡ ಪ್ರಮಾಣದಲ್ಲಿರುವ ಕಾರಣ 3–4 ದಿನಗಳಿಂದ ಸಾರಿಗೆ ಇಲಾಖೆ ಬಸ್ ಸಂಚಾರವನ್ನು ಸ್ಥಗಿತಗೊಳಿಸಲಾಗಿದ್ದರಿಂದ ಸಾರ್ವಜನಿಕರಿಗೆ ಮತ್ತು ಶಾಲಾ–ಕಾಲೇಜ್ ವಿದ್ಯಾರ್ಥಿಗಳು ಪರದಾಡುವಂತಹ ಪರಿಸ್ಥಿತಿ ನಿರ್ಮಾಣವಾಗಿದೆ ಎಂದು ದೂರಿದರು. ಬಹುಗಾತ್ರ ವಾಹನಗಳನ್ನು ಮತ್ತು ಅಕ್ರಮ ಗಣಿಗಾರಿಕೆಯಲ್ಲಿ ತೊಡಗಿರುವ ಟಿಪ್ಪರ್ ಟಿಪ್ಪರ್ ಹಾವಳಿ ತಪ್ಪಿಸಬೇಕೆಂದು ಒತ್ತಾಯಿಸಿದರು. ಈ ಸಂದರ್ಭದಲ್ಲಿ ದೇವಣ್ಣ ನಾಯಕ, ಮಹಾಂತೇಶ ಭಜಂತ್ರಿ ತಲೇಖಾನ, ಯಂಕಣ್ಣ ನಾಯಕ ತಲೇಖಾನ, ಮೌನೇಶ ನಾಯಕ ನಗನೂರು, ಆನಂದ ಕುಮಾರ ಯರದೊಡ್ಡಿ, ಯಂಕಣ್ಣ ಯರದೊಡ್ಡಿ ಇದ್ದರು.

# ಭೀಮಮ್ಮ ಆನೆಗುಂದಿ ಅವರ 'ಬಾಳ ಪಯಣ' ಕವನ ಸಂಕಲನ ಆಯ್ಕೆ

**ನೈಜ್ಯ ದೆಸೆ ನ್ಯೂಸ್**

**ಸಿಂಧನೂರು: ಸಿಂಧನೂರು ತಾಲೂಕಿನ ತುರುವಿಹಾಳ ಗ್ರಾಮದ ಭೀಮಮ್ಮ ಶಿವಪ್ಪ ಆನೆಗುಂದಿ (ಭೂಮಿ) ಅವರ 'ಬಾಳ ಪಯಣ' ಕರ್ನಾಟಕ ಸರಕಾರ ಕನ್ನಡ ಪುಸ್ತಕ ಪ್ರಾಧಿಕಾರದ ಪ್ರೋತ್ಸಾಹ ಧನಕ್ಕೆ ಚೊಚ್ಚಲ ಕೃತಿ ಆಯ್ಕೆಯಾಗಿದೆ ಎಂದು ಶ್ರೀನಿಧಿ ಪ್ರಕಾಶನದ ಗೌರವ ಸಂಚಾಲಕ ಬೀರಪ್ಪ ಶಂಭೋಜಿ ತಿಳಿಸಿದ್ದಾರೆ.**



ಸಿಂಧನೂರಿನ ಸರಕಾರಿ ಪ್ರಥಮ ದರ್ಜೆ ಪದವಿ ಮಹಾವಿದ್ಯಾಲಯದಲ್ಲಿ ಬಿ.ಎಸ್‌ಸಿ ವ್ಯಾಸಂಗ ಮಾಡುವ ಸಂದರ್ಭದಲ್ಲಿಯೆ ಕನ್ನಡ ವಿಷಯದ ಸಹಾಯಕ ಪ್ರಾಧ್ಯಾಪಕ ಡಾ॥ ಕೆ. ಖಾದರ್ ಭಾಷ ಅವರ ಪ್ರೋತ್ಸಾಹ ಮಾರ್ಗದರ್ಶನದಲ್ಲಿ ಸಾಹಿತ್ಯದ ಅಭಿರುಚಿ ಹೊಂದಿದ್ದ ಭೀಮಮ್ಮ ಹಲವಾರು ಕವನಗಳನ್ನು ಬರೆದಿದ್ದರು. ಪ್ರಸ್ತುತ ರಾಯಚೂರಿನ ಎಸ್.ಆರ್. ಕೆ. ಶಿಕ್ಷಣ ಮಹಾವಿದ್ಯಾಲಯದಲ್ಲಿ ಬಿ.ಇಡಿ. ಮಾಡುತ್ತಿದ್ದಾರೆ. ಅಭಿನಂದನೆಗಳು: ಭೀಮಮ್ಮ ಆನೆಗುಂದಿ ಅವರ ಚೊಚ್ಚಲ ಕೃತಿ ಕನ್ನಡ ಪುಸ್ತಕ ಪ್ರಾಧಿಕಾರದ ಪ್ರೋತ್ಸಾಹಧನಕ್ಕೆ ಆಯ್ಕೆಯಾಗಿರುವುದಕ್ಕೆ ಎಸ್.ಆರ್.ಕೆ. ಶಿಕ್ಷಣ ಮಹಾವಿದ್ಯಾಲಯದ ಪ್ರಾಚಾರ್ಯ ವಿರೂಪಾಕ್ಷಿ ಬಿ.ಎಮ್. ಲೋಹಿಯಾ ಪ್ರಕಾಶನದ ಭೀಮನಗೌಡ ಇಟಗಿ, ವಚನ ಸಾಹಿತ್ಯ ಪರಿಷತ್ ಮಹಿಳಾ ಘಟಕದ ಜಿಲ್ಲಾಧ್ಯಕ್ಷೆ ರಮಾದೇವಿ ಶಂಭೋಜಿ, ಸಿಂಧನೂರು ತಾಲೂಕ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಹೆಚ್.ಎಫ್.ಮಸ್ಕಿ ತಾಲೂಕ ಚುಟುಕು ಸಾಹಿತ್ಯ ಪರಿಷತ್ ಅಧ್ಯಕ್ಷ ಎಮ್.ಭಾಸ್ಕರ್, ದಲಿತ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಡಾ॥ ಹುಸೇನಪ್ಪ ಅಮರಾಪೂರ ಅಭಿನಂದನೆಗಳನ್ನು ಸಲ್ಲಿಸಿದ್ದಾರೆ.

# ತುರ್ವಿಹಾಳ ಎಸ್ ಎಲ್ ವಿ ಇಂಗ್ಲಿಷ್ ಮಾಧ್ಯಮ ಪ್ರಾಥಮಿಕ ಶಾಲೆಯಲ್ಲಿ ಸರ್ವಜ್ಞ ಜಯಂತಿ ಆಚರಣೆ

**ನೈಜ್ಯ ದೆಸೆ ನ್ಯೂಸ್**

**ತುರ್ವಿಹಾಳದ ಎಸ್.ಎಲ್.ವಿ ಇಂಗ್ಲಿಷ್ ಮಾಧ್ಯಮ ಪ್ರಾಥಮಿಕ ಶಾಲೆಯಲ್ಲಿ ತ್ರಿಪದಿಗಳ ಬ್ರಹ್ಮ ಎಂದೇ ಖ್ಯಾತರಾದ ಸರ್ವಜ್ಞ ಅವರ ಜಯಂತಿಯನ್ನು ಅತ್ಯಂತ ಭಕ್ತಿಭಾವದಿಂದ ಹಾಗೂ ಸಂಭ್ರಮದಿಂದ ಆಚರಿಸಲಾಯಿತು.**



ಕಾರ್ಯಕ್ರಮವನ್ನು ಶಾಲೆಯ ಮುಖ್ಯೋಪಾಧ್ಯಾಯರು ಉದ್ಘಾಟಿಸಿ, ಸರ್ವಜ್ಞರ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಿದರು. ನಂತರ ಶಿಕ್ಷಕರು ಸರ್ವಜ್ಞರ ಜೀವನ ಚರಿತ್ರೆ, ಅವರ ತ್ರಿಪದಿಗಳ ವೈಶಿಷ್ಟ್ಯತೆ ಹಾಗೂ ಸಮಾಜ ಸುಧಾರಣೆಯಲ್ಲಿ ಅವರ ಪಾತ್ರದ ಕುರಿತು ವಿದ್ಯಾರ್ಥಿಗಳಿಗೆ ಮನೋಜ್ಞವಾಗಿ ವಿವರಿಸಿದರು. ವಿದ್ಯಾರ್ಥಿಗಳು ಸರ್ವಜ್ಞರ ಪ್ರಸಿದ್ಧ ತ್ರಿಪದಿಗಳನ್ನು ಪಠಿಸಿ, ಅವರ ಸಂದೇಶಗಳ ಅರ್ಥವನ್ನು ತಿಳಿದುಕೊಂಡರು. ಕೆಲವು ವಿದ್ಯಾರ್ಥಿಗಳು ಸರ್ವಜ್ಞರ ಕುರಿತಾಗಿ ಭಾಷಣ ಮಾಡಿದ್ದು, ಅವರ ಸರಳ ಸಾಹಿತ್ಯ ಶೈಲಿ ಮತ್ತು ಗಂಭೀರವಾದ ಜೀವನ ತತ್ತ್ವಗಳನ್ನು ವಿವರಿಸಿದರು.

ಸರ್ವಜ್ಞರು ತಮ್ಮ ತ್ರಿಪದಿಗಳ ಮೂಲಕ ಅಜ್ಞಾನ, ಅಹಂಕಾರ ಮತ್ತು ಅನ್ಯಾಯಗಳ ವಿರುದ್ಧ ಧ್ವನಿ ಎತ್ತಿ, ಸತ್ಯ, ನೀತಿ ಮತ್ತು ಧರ್ಮದ ಮಾರ್ಗವನ್ನು ತೋರಿಸಿದ ಮಹಾನ್ ಕವಿ. ಅವರ ಕೃತಿಗಳು ಇಂದಿಗೂ ಸಮಾಜಕ್ಕೆ ದಾರಿ ತೋರಿಸುವ ದೀಪವಾಗಿವೆ. ಈ ಕಾರ್ಯಕ್ರಮದ ಮೂಲಕ ವಿದ್ಯಾರ್ಥಿಗಳಲ್ಲಿ ಕನ್ನಡ ಸಾಹಿತ್ಯದ ಬಗ್ಗೆ ಆಸಕ್ತಿ, ಸಂಸ್ಕೃತಿ ಮೌಲ್ಯಗಳ ಬಗ್ಗೆ ಗೌರವ ಹಾಗೂ ನೈತಿಕತೆ ಬಗ್ಗೆ ಜಾಗೃತಿ ಮೂಡಿಸಲಾಯಿತು. ಕಾರ್ಯಕ್ರಮದಲ್ಲಿ ಶಾಲೆಯ ಮುಖ್ಯೋಪಾಧ್ಯಾಯರು, ಶಿಕ್ಷಕ ವೃಂದ ಹಾಗೂ ವಿದ್ಯಾರ್ಥಿಗಳು ಉತ್ಸಾಹದಿಂದ ಭಾಗವಹಿಸಿದ್ದರು.

# ರೈತರ ವಿವಿಧ ಬೇಡಿಕೆಗಳ ಈಡೇರಿಕೆಗಾಗಿ ಕೆ ಆರ್ ಎಸ್ ಪಕ್ಷದಿಂದ ತಹಶೀಲ್ದಾರರಿಗೆ ಆಗ್ರಹ.

**ನೈಜ್ಯ ದೆಸೆ ನ್ಯೂಸ್**

**ಚಿತ್ರದುರ್ಗ: ಕರ್ನಾಟಕ ರಾಷ್ಟ್ರ ಸಮಿತಿ ಪಕ್ಷದ ರಾಜ್ಯ ರೈತ ಘಟಕದಿಂದ ದಿನಾಂಕ 19.02.2026 ರಂದು ಹಮ್ಮಿಕೊಂಡಿದ್ದ ರೈತರ ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿಚಿತ್ರದುರ್ಗ ತಹಶೀಲ್ದಾರರಿಗೆ ಹಾಗೂ ಮಾನ್ಯ ಜಿಲ್ಲಾಧಿಕಾ–ರಿಗಳು ಚಿತ್ರದುರ್ಗ ಇವರಿಗೆ ಮನವಿ ಮೂಲಕ ಆಗ್ರಹಿಸುವ ಕಾರ್ಯಕ್ರಮ ಯಶಸ್ವಿಯಾಗಿ ನಡೆಯಿತು.**







ಕಾರ್ಯಕ್ರಮವನ್ನು ಉದ್ದೇಶಿಸಿ ಮಾತನಾಡಿದ ರಾಜ್ಯ ರೈತ ಘಟಕದ ರಾಜ್ಯ ಕಾರ್ಯದರ್ಶಿ ನಿರುಪಾದಿ ಕೆ ಗೋಮರ್ಸಿ ಅವರು ಮಾತನಾಡಿ ಚಿತ್ರದುರ್ಗ ತಾಲೂಕಿನಲ್ಲಿ ಪಕ್ಷದ ರಾಜ್ಯ ರೈತ ಘಟಕ ಹಾಗೂ ತಾಲೂಕು ಸಮಿತಿ ವತಿಯಿಂದ ಕಳೆದ ಒಂದು ವಾರಗಳಿಂದ #ರೈತಚೈತನ್ಯಯಾತ್ರೆ ಅಭಿಯಾನ ಹಮ್ಮಿಕೊಳ್ಳಲಾಗಿತ್ತು ಈ ಸಂಧರ್ಭದಲ್ಲಿ ತಾಲೂಕಿನ ನೂರಾರು ಹಳ್ಳಿಗಳ ಸಾವಿರಾರು ರೈತರು,ಕೃಷಿ ಕಾರ್ಮಿಕರು,ಮಹಿಳೆಯರು,ಯುವಕ–ಯುವತಿಯರು,ವಿದ್ಯಾರ್ಥಿಗಳನ್ನು ಭೇಟಿ ಮಾಡಿ ಅವರ ಜೊತೆ ಸಂವಾದ ನಡೆಸಿ,ಇವರೆಲ್ಲರ ಕಷ್ಟ ನಷ್ಟಗಳನ್ನು,ಕುಂದು ಕೊರತೆಗಳನ್ನು ಆಲಿಸಿ ಅವರು ನೀಡಿದ ಹಲವಾರು ಸಮಸ್ಯೆಗಳ ಪಟ್ಟಿಯನ್ನು ಪರಿಹರಿಸಿ ತಾಲೂಕಿನ ಜನರಿಗೆ ಪಾರದರ್ಶಕ ಮತ್ತು ಉತ್ತಮ ಆಡಳಿತ ವ್ಯವಸ್ಥೆಯನ್ನು ಕಟ್ಟಿಕೊಟ್ಟು ತಾಲೂಕಿನ ಜನರ ಅಭಿವೃದ್ಧಿಗೆ ಶ್ರಮಿಸುವಂತೆ ಮಾನ್ಯ ತಹಶೀಲ್ದಾರರವ–ರಿಗೆ ಒತ್ತಾಯಿಸಲಾಗಿದೆ ಎಂದು ತಿಳಿಸಿದರು.

ರಾಜ್ಯ ಸಂಘಟನಾ ಕಾರ್ಯದರ್ಶಿ ಹಾಗೂ ಚಿತ್ರದುರ್ಗ ಜಿಲ್ಲಾ ಉಸ್ತುವಾರಿ ಶ್ರೀ ಕೆ ಎಸ್ ವೀರಭದ್ರಪ್ಪ ಅವರು ಮಾತನಾಡಿ ಚಿತ್ರದುರ್ಗ ತಾಲೂಕಿನಲ್ಲಿ ರೈತರ,ಮಹಿಳೆಯರ, ಕೃಷಿ ಕಾರ್ಮಿಕರ,ಸಮಸ್ಯೆಗಳು ಬೆಟ್ಟದಷ್ಟು ಇದ್ದು ಇವುಗಳನ್ನು ಪರಿಹರಿಸುವ ಕೆಲಸ ಮಾಡಬೇಕಾಗಿದ್ದ ಕ್ಷೇತ್ರದ ಎಲಃ ಪಕ್ಷಗಳ ಮುಖಂಡರು ಕೇವಲ ಚುನಾವಣಾ ಸಂಧರ್ಭದಲ್ಲಿ ಜನತೆಗೆ ನೂರಾರು ಸುಳ್ಳು ಪೊಳ್ಳು ಭರವಸೆಗಳನ್ನು ನೀಡಿ ಮತದಾರರಿಗೆ ಮೋಸ ಮಾಡುತ್ತಿದ್ದಾರೆ,ನಮ್ಮ ಪಕ್ಷವು ಯಾವುದೇ ಅಧಿಕಾರದಲ್ಲಿ ಇಲ್ಲದೆಯೂ ಸಹ ಜನ ಸಾಮಾನ್ಯರ ಧ್ವನಿಯಾಗಿ ಕಳೆದ ಆರು ವರ್ಷಗಳಿಂದ ನಿತ್ಯ, ನಿರಂತರವಾಗಿ ಇಡೀ ರಾಜ್ಯಾದ್ಯಂತ ಅನ್ಯಾಯ, ಅಕ್ರಮ, ಭ್ರಷ್ಟಾಚಾರಗಳ ಅಧಿಕಾರಿಗಳು ಜನ ಸಾಮಾನ್ಯರ ಮೇಲೆ ಮಾಡುವ ದಬ್ಬಾಳಿಕೆ, ದೌರ್ಜನ್ಯಗಳ ವಿರುದ್ಧ ಸದಾ ಹೋರಾಟವನ್ನು, ಅಭಿಯಾನಗಳನ್ನು, ಕಾರ್ಯಕ್ರಮಗಳನ್ನು ನಡೆಸುತ್ತಿದೆ ಇದು ಜನರ ಕಲ್ಯಾಣಕ್ಕಾಗಿ ಇರುವ ಪಕ್ಷವಾಗಿದೆ ಎಂದು ತಿಳಿಸಿದರು.

ತಾಲೂಕಿನಲ್ಲಿ ಅಕ್ರಮ ಮದ್ಯ ಮಾರಾಟವಾಗುತ್ತಿದ್ದು ಇದನ್ನು ಕೂಡಲೇ ನಿಲ್ಲಿಸಬೇಕು.ತಾಲೂಕಿನಲ್ಲಿ ರೈತರ ಪಂಪ್ ಸೆಟ್ ಗಳಿಗೆ ಸಮರ್ಪಕವಾಗಿ ನಿರಂತರ 7 ಗಂಟೆಕಾಲ ಗುಣಮಟ್ಟದ ವಿದ್ಯುತ್ ಸರಬರಾಜು ಆಗಬೇಕು. ಎಲ್ಲಾ ಬೆಳೆಗಳಿಗೆ ಫಸಲ್ ಭೀಮ ವಿಮೆ ಅನ್ವಯವಾಗುವಂತೆ ಕಾನೂನು ತಿದ್ದುಪಡಿ ಆಗಬೇಕು ಮತ್ತು ರೈತನ ಬೆಳೆ ನಷ್ಟವಾದಾಗ ಸುಲಭ ಮತ್ತು ಸರಳವಾಗಿ ಬೆಳೆ ಪರಿಹಾರ ರೈತನಿಗೆ ದೊರೆಯಬೇಕು. ಬೆಳೆ ಸಮೀಕ್ಷೆ ಪ್ರಾಮಾಣಿಕವಾಗಿ ಆಗಬೇಕು. ಭದ್ರ ಮೇಲ್ದಂಡೆ ಕಾಮಗಾರಿಯನ್ನು ಶೀಘ್ರವಾಗಿ ಸಮರೋಪಾದಿಯಲ್ಲಿ ಮುಗಿಸಿ ರೈತರ ಕೃಷಿ ಜಮೀನಿಗೆ ನೀರು ನೀಡಬೇಕು. ಕೃಷಿ ಇಲಾಖೆಯಲ್ಲಿ ರೈತರಿಗೆ ಸಿಗುವ ಬಿತ್ತನೆ ಬೀಜ ಗೊಬ್ಬರ ಮತ್ತು ಕೃಷಿ ಉಪಕರಣಗಳು ಸುಲಭವಾಗಿ ದೊರೆಯಬೇಕು.

ದಿನಾಂಕ 09.12.2025 ರಂದು ಪಕ್ಷದ ವತಿಯಿಂದ ಬೆಳಗಾವಿ ಅಧಿವೇಶನದ ಸಂಧರ್ಭದಲ್ಲಿ ಸರ್ಕಾರಕ್ಕೆ ಸಲ್ಲಿಸಿದ 32 ಅಂಶಗಳನ್ನು ಶೀಘ್ರವಾಗಿ ಜಾರಿಗೆ ತರಬೇಕು.ಎಂದು ಒತ್ತಾಯಿಸಲಾಯಿತು. ಇದೇ ಸಂದರ್ಭದಲ್ಲಿ ಪಕ್ಷದ ರಾಜ್ಯ ರೈತ ಘಟಕದ ಕಾರ್ಯದರ್ಶಿಗಳಾದ ಶ್ರೀ ನಾಗರೆಡ್ಡಿ, ಜಿಲ್ಲಾ ಮುಖಂಡಾರದ ಅಂಜಿನಪ್ಪ ವೈ, ಅರುಣ್ ಕುಮಾರ್,ಮಹಿಳಾ ಘಟಕದ ಜಿಲ್ಲಾ ಪ್ರಧಾನ ಕಾರ್ಯದರ್ಶಿಗಳಾದ ಶ್ರೀ ರೇಖಾ,ತಾಲೂಕ ಅಧ್ಯಕ್ಷರಾದ ಶ್ರೀ ಸಿದ್ದೇಶ್ ಭರಮಸಾಗರ,ಉಪಾಧ್ಯಕ್ಷರಾದ ಹನುಮಂತಪ್ಪ,ಪ್ರಧಾನ ಕಾರ್ಯದರ್ಶಿಗಳಾದ ತೌಶಿಫ್,ಕಾರ್ಯದರ್ಶಿಗಳಾದ ಕೃಷ್ಣಪ್ಪ,–ಆಂಜನಪ್ಪ,ಶಿವಣ್ಣ,ನಾಗರಾಜ್,ಲಲಿತಮ್ಮ,ಲಕ್ಷ್ಮಮ್ಮ, ದಾದಪೀರ್,ಸಿದ್ದೇಶ್ವರ,ರಾಜಪ್ಪ ಸೇ–ರಿದಂತೆ ನೂರಾರು ಜನರು ಸೇರಿದ್ದರು.

## ಶಿಕ್ಷಣ ಮಾರ್ಗದರ್ಶಿ ವಿಶೇಷ

### M.V.Sc. Veterinary Parasitology

ಪಶುವೈದ್ಯಕೀಯ ವಿಜ್ಞಾನ ಕ್ಷೇತ್ರದಲ್ಲಿ ಎಂ.ವಿ.ಎಸ್‌ಸಿ. (Master of Veterinary Science) ಪಶು ಪರಾಸಿತಶಾಸ್ತ್ರವು ಪ್ರಾಣಿಗಳ ಆರೋಗ್ಯ ಮತ್ತು ಕ್ಷೇಮವನ್ನು ಕಾಪಾಡುವಲ್ಲಿ ಮಹತ್ವದ ಪಾತ್ರವಹಿಸುತ್ತದೆ. ಪ್ರಾಣಿಗಳಲ್ಲಿ ಕಾಣಿಸಿಕೊಳ್ಳುವ ಪರೋಪಜೀವಿಗಳನ್ನು (Parasites) ಅಧ್ಯಯನ ಮಾಡುವುದು ಮತ್ತು ಅವುಗಳನ್ನು ನಿಯಂತ್ರಿಸುವುದು ಈ ವಿಭಾಗದ ಮುಖ್ಯ ಉದ್ದೇಶವಾಗಿದೆ. ಈ ಶಾಖೆ ಪಶುಸಂಗೋಪನೆ ಮತ್ತು ಸಾಕುಪ್ರಾಣಿಗಳ ಸಮಗ್ರ ಆರೋಗ್ಯವನ್ನು ಖಚಿತಪಡಿಸುತ್ತದೆ. ಈ ಲೇಖನವು ಎಂ.ವಿ.ಎಸ್‌ಸಿ. ಪಶು ಪರಾಸಿತಶಾಸ್ತ್ರದ ಮಹತ್ವ, ವ್ಯಾಪ್ತಿ ಮತ್ತು ಈ ಕ್ಷೇತ್ರದಲ್ಲಿ ಸೇವೆ ಸಲ್ಲಿಸುವ ತಜ್ಞರ ಪಾತ್ರವನ್ನು ವಿವರಿಸುತ್ತದೆ. ಪಶು ಪರಾಸಿತಶಾಸ್ತ್ರದ ಮೂಲಭೂತ ಅಂಶಗಳು ಪರೋಪಜೀವಿಗಳ ಪಾತ್ರವನ್ನು ತಿಳಿದುಕೊಳ್ಳುವುದು ಪರೋಪಜೀವಿಗಳು (Parasites) ಇತರ ಜೀವಿಗಳ ಮೇಲೆ ಅವಲಂಬಿತರಾಗಿ ಬದುಕುವ ಜೀವಿಗಳು. ಪಶುವೈದ್ಯಕೀಯ ಕ್ಷೇತ್ರದಲ್ಲಿ ಈ ಪರೋಪಜೀವಿಗಳನ್ನು ಮುಖ್ಯವಾಗಿ ಮೂರು ವರ್ಗಗಳಲ್ಲಿ ವಿಂಗಡಿಸಲಾಗುತ್ತದೆ: ಪ್ರೋಟೋಜೋವಾ (Protozoa) ಏಕಕೋಶೀಯ ಸೂಕ್ಷ್ಮಜೀವಿಗಳು ಹೆಲ್ಮಿಂಥ್ಸ್ (Helminths) ಹುಳುಗಳು (ಉದಾ: ರೌಂಡ್‌ವರ್ಮ್, ಟೇಪ್‌ವರ್ಮ್) ಆರ್ಥ್ರೋಪೋಡ್ಸ್ (Arthropods) ಚಿಮ್ಮುಗಳು, ಹುಳುಕೀಟಗಳು, ಜಿಂಕೆಹುಳುಗಳು ಇತ್ಯಾದಿ ಈ ಪರೋಪಜೀವಿಗಳ ಜೀವನಚಕ್ರ, ವಾಸಸ್ಥಾನ ಮತ್ತು ವರ್ತನೆಗಳನ್ನು ಸಮಗ್ರವಾಗಿ ತಿಳಿದುಕೊಳ್ಳುವುದು ಅವುಗಳನ್ನು ಪರಿಣಾಮಕಾರಿಯಾಗಿ ನಿಯಂತ್ರಿಸಲು ಮತ್ತು ತಡೆಗಟ್ಟಲು ಅತ್ಯಂತ ಅಗತ್ಯವಾಗಿದೆ. ಎಂ.ವಿ.ಎಸ್‌ಸಿ. ಪಶು ಪರಾಸಿತಶಾಸ್ತ್ರವು ರೋಗನಿರ್ಣಯ, ಚಿಕಿತ್ಸೆ, ನಿಯಂತ್ರಣ ಕ್ರಮಗಳು ಮತ್ತು ತಡೆಗಟ್ಟುವಿಕೆ ಕುರಿತಾಗಿ ಆಳವಾದ ಅಧ್ಯಯನವನ್ನು ಒಳಗೊಂಡಿದೆ. ಈ ಕ್ಷೇತ್ರದಲ್ಲಿ ಪರಿಣತಿ ಹೊಂದಿದ ಪಶುವೈದ್ಯರು ಪಶುಸಂಗೋಪನಾ ಕ್ಷೇತ್ರದ ಅಭಿವೃದ್ಧಿಗೆ ಮಹತ್ತರ ಕೊಡುಗೆ ನೀಡುತ್ತಾರೆ.ಪ್ರವೇಶ ಪಡೆಯುವ ವಿಧಾನ ಎಂ.ವಿ.ಎಸ್‌ಸಿ. (Master of Veterinary Science) Veterinary Parasitology ವಿಭಾಗದಲ್ಲಿ ಪ್ರವೇಶ ಪಡೆಯಲು ಕೆಳಗಿನ ಹಂತಗಳನ್ನು ಅನುಸರಿಸಬೇಕು: 1) ಕೋರ್ಸ್‌ಗಳ ಕುರಿತು ಮಾಹಿತಿ ಸಂಗ್ರಹಿಸಿಕೊಳ್ಳಿ (Research Programs) ಮೊದಲು Veterinary Parasitology ವಿಶೇಷತೆಯೊಂದಿಗೆ ಎಂ.ವಿ.ಎಸ್‌ಸಿ. ಕೋರ್ಸ್‌ಗಳನ್ನು ನೀಡುವ ವಿಶ್ವವಿದ್ಯಾಲಯಗಳು ಮತ್ತು ಸಂಸ್ಥೆಗಳ ಕುರಿತು ಮಾಹಿತಿ ಸಂಗ್ರಹಿಸಿಕೊಳ್ಳಿ. ನಿಮ್ಮ ಶೈಕ್ಷಣಿಕ ಮತ್ತು ವೃತ್ತಿ ಗುರಿಗಳಿಗೆ ಹೊಂದಿಕೊಳ್ಳುವ ಸಂಸ್ಥೆಯನ್ನು ಆಯ್ಕೆಮಾಡಿ. 2) ಅರ್ಹತಾ ಮಾನದಂಡಗಳನ್ನು ಪರಿಶೀಲಿಸಿ (Check Eligibility Requirements) ನೀವು ಆಯ್ಕೆಮಾಡಿದ ಕೋರ್ಸ್‌ಗೆ ಸಂಬಂಧಿಸಿದ ಪ್ರವೇಶ ಅರ್ಹತೆಗಳನ್ನು ಪರಿಶೀಲಿಸಿ. ಸಾಮಾನ್ಯವಾಗಿ ಕೆಳಗಿನ ಅರ್ಹತೆಗಳು ಅಗತ್ಯವಾಗಿರುತ್ತವೆ: ಮಾನ್ಯತೆ ಪಡೆದ ವಿಶ್ವವಿದ್ಯಾಲಯದಿಂದ B.V.Sc. & A.H. ಪದವಿ ಕನಿಷ್ಠ ಶೇಕಡಾವಾರು ಅಂಕಗಳು ಅಗತ್ಯವಿದ್ದರೆ ಇಂಟರ್ನ್‌ಶಿಪ್ ಪೂರ್ಣಗೊಳಿಸಿರುವುದು ಸಂಬಂಧಿತ ಪ್ರವೇಶ ಪರೀಕ್ಷೆಯ ಅರ್ಹತೆ 3) ಪ್ರವೇಶ ಪರೀಕ್ಷೆಗಳು (Entrance Examinations) ಹೆಚ್ಚಿನ ವಿಶ್ವವಿದ್ಯಾಲಯಗಳು ಅಥವಾ ಕೃಷಿ/ಪಶುವೈದ್ಯಕೀಯ ವಿಶ್ವವಿದ್ಯಾಲಯಗಳು ಪ್ರವೇಶಕ್ಕಾಗಿ ಪ್ರವೇಶ ಪರೀಕ್ಷೆಯನ್ನು ನಡೆಸುತ್ತವೆ. ಎಂ.ವಿ.ಎಸ್‌ಸಿ. ಕೋರ್ಸ್‌ಗಳಿಗೆ ಸಾಮಾನ್ಯವಾಗಿ ಪಶುವೈದ್ಯಕೀಯ ವಿಜ್ಞಾನಕ್ಕೆ ಸಂಬಂಧಿಸಿದ ಪ್ರವೇಶ ಪರೀಕ್ಷೆಯನ್ನು ಬರೆಯಬೇಕು. ಈ ಪರೀಕ್ಷೆಯಲ್ಲಿ ನಿಮ್ಮ ವಿಷಯ ಜ್ಞಾನ ಮತ್ತು ತಾಂತ್ರಿಕ ಅರಿವು ಮೌಲ್ಯಮಾಪನ ಮಾಡಲಾಗುತ್ತದೆ.

ನೈಜ್ಯ ದೆಸೆ ಕನ್ನಡ ದಿನಪತ್ರಿಕೆಯನ್ನು ತಪ್ಪದೆ ಓದಿರಿ.

# ಉದ್ಯೋಗ ಖಾತ್ರಿ ಹಣ ದುರ್ಬಳಕೆ ಲೆಕ್ಕ ಪರಿಶೋಧನ ವರದಿ ಆಧರಿಸಿ ಪ್ರಕರಣ ದಾಖಲಿಸಿಕೊಂಡು ಕಾನೂನು ಕ್ರಮ ಕೈಗೊಳ್ಳಲು :ಪ್ರಭುಲಿಂಗ ಮೇಗಳಮನಿ ಅಗ್ರಹ

ನೈಜ್ಯ ದೆಸೆ ನ್ಯೂಸ್

**ಲಿಂಗಸಗೂರು: ತಾಲೂಕು ಪಂಚಾಯತಿ ವ್ಯಾಪ್ತಿಯ ವಿವಿಧ ಗ್ರಾಮ ಪಂಚಾಯತಿ ಮತ್ತು ವಿವಿಧ ಇಲಾಖೆಗಳಲ್ಲಿ ಉದ್ಯೋಗ ಖಾತ್ರಿ ಹಾಗೂ ಸರ್ಕಾರದ ವಿವಿಧ ಯೋಜನೆಗಳ ಅನುಷ್ಠಾನದಲ್ಲಿ ಭಾರಿ ಪ್ರಮಾಣದ ಭ್ರಷ್ಟಚಾರ ನಡೆಯುತ್ತಿರುವ ಆರೋಪಗಳು ಕುರಿತು ದಾಖಲೆ ಸಮೇತ ದೂರು ಸಲ್ಲಿಸುತ್ತಿದ್ದು ಲೆಕ್ಕ ಪರಿಶೋಧನ ವರದಿ ಆಧರಿಸಿ ಪ್ರಕರಣ ದಾಖಲಿಸಿ ಕೊಂಡು ಕಾನೂನು ಕ್ರಮ ಕೈಗೊಳ್ಳುವಂತೆ ದ ಸಂ ಸ (ನಾಗವಾರ ಬಣ) ದ ರಾಜ್ಯ ಸಂಘಟನಾ ಸಂಚಾಲಕ ಪ್ರಭುಲಿಂಗ ಮೇಗಳಮನಿ ಸಹಾಯಕ ಆಯುಕ್ತರಿಗೆ ಮನವಿಯನ್ನು ಸಲ್ಲಿಸಿ ನಂತರ ಮಾತನಾಡಿದ ಅವರು.**



2005-06ರಲ್ಲಿ ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ ಅನುಷ್ಠಾನಕ್ಕೆ ತರಲಾಗಿದೆ. ಉದ್ಯೋಗ ಖಾತ್ರಿಯಲ್ಲಿ ಹಣ ದುಃ ದುರ್ಬಳಿಕೆ ತಡೆಯಲು ನಂತರದ ವರ್ಷಗಳಲ್ಲಿ ಸತ್ಯಾಸತ್ಯತೆ ಪರಿಶೀಲನೆ ನಡೆಸಲು ಸಾಮಾಜಿಕ ಲೆಕ್ಕ ಪರಿಶೋಧನ ಸಮಿತಿ ರಚಿಸಲಾಗಿದೆ. ಆದರೆ, ಲೆಕ್ಕ ಪರಿಶೋಧನ ಸಮಿತಿ ಪ್ರತಿವರ್ಷ ಸಲ್ಲಿಸುವ ವರದಿಗಳನ್ನು ಆದರಿಸಿ ಹಿರಿಯ ಅಧಿಕಾರಿಗಳು ಕ್ರಮ ಕೈಗೊಳ್ಳುವಲ್ಲಿ ವಿಫಲರಾಗಿದ್ದಾರೆ. ಗ್ರಾಮ ಸಭೆಗಳಲ್ಲಿ ಕಾಮಗಾರಿಗಳ ಅನುಮೋದನೆ ಪಡೆಯದೆ, ಕ್ರೀಯಾ ಯೋಜನೆ ಇಲ್ಲದೆ ಕೆಲಸ ನಿರ್ವಹಿಸಿ ಎಂ.ಬಿ. (ಅಳತೆ ಪುಸ್ತಕ) ರೆಕಾರ್ಡ್ ಬರೆಯದೆ ಹಣ ಪಾವತಿ, ಸರ್ಕಾರಿ ನೌಕರರು ಮತ್ತು ಕೆಲಸಕ್ಕೆ ಹೋಗದವರ ಹೆಸರಿನಲ್ಲಿ ಕೂಲಿ ಪಾವತಿ, ಸಾಮಾಗ್ರಿ ಖರೀದಿ, ಬಿಲ್ ವ್ಯತ್ಯಾಸ, ನಕಲಿ ಬಿಲ್‌ಗಳು ಗುತ್ತಿಗೆದಾರರ ಮೂಲಕ ಅನುಷ್ಠಾನ, ನಿಗದಿತ ಸ್ಥಳದಲ್ಲಿ ಕೆಲಸ ಮಾಡದಿರುವುದು ಸೇರಿದಂತೆ ಹಣ ದುರ್ಬಳಿಕೆ ಮಾಡಿಕೊಂಡಿರುವ ಬಗ್ಗೆ ಲೆಕ್ಕ ಪರಿಶೋಧನೆ ಸಮತಿ ವರದಿ ಸಲ್ಲಿಸುತ್ತ ಬಂದಿದೆ. ಲಿಂಗಸಗೂರು ತಾಲೂಕು ಆನೆಹೊಸೂರು ಗ್ರಾಮ ಪಂಚಾಯತಿಯಲ್ಲಿ 2019-20ರಲ್ಲಿ 63 ಕಾಮಗಾರಿಗಳಿಗೆ ಕೂಲಿ ಮತ್ತು ಸಾಮಾಗ್ರಿ ವೆಚ್ಚ ಎಂದು ರೂ.29,89,691 ವ್ಯಯ ಮಾಡಲಾಗಿದೆ. 2020-21ರಲ್ಲಿ ಗ್ರಾಮ ಸಭೆಯಲ್ಲಿ ಲೆಕ್ಕ ಪರಿಶೋಧನೆ ಸಮಿತಿ ಪರಿಶೀಲನೆ ನಡೆಸಿ ರೂ.80,945 ವಸೂಲಾತಿ ಹಾಗೂ ರೂ.27,28,872 ಹಣ ವಿವಿಧ ಕಾರಣಗಳಿಂದ ದುರ್ಬಳಿಕೆ ಆಗಿರುವ ಕುರಿತು ವರದಿ ಸಲ್ಲಿಸಿದ್ದರೂ ಕೂಡ ಇಂದಿಗೂ ಯಾವುದೇ ಕ್ರಮ ಕೈಗೊಳ್ಳದಿರುವುದು ಹಿರಿಯ ಅಧಿಕಾರಿಗಳು ಶಾಮೀಲಾಗಿರುವುದು ಸಂಶಯಕ್ಕೆ ಎಡೆಮಾಡಿಕೊಟ್ಟಿದೆ.

ಇದೇ ರೀತಿ ಆನೆಹೊಸೂರು ಸೇರಿದಂತೆ ಗುಂತಗೋಳ, ನಾಗರಹಾಳ, ಗೊರೇಬಾಳ, ಕೈರವಾಡಗಿ, ಬಯ್ಯಾಪುರ, ಮಾವಿನಭಾವಿ, ಕೋಠಾ, ಬನ್ನಿಗೋಳ, ಹೊನ್ನಹಳ್ಳಿ, ಗೌಡೂರು, ಹಲ್ಕಾವಟಗಿ, ದೇವರಭೂಪೂರು, ರೋಡಲಬಂಡ (ತವಗ), ನೀರಲಕೇರಿ, ಕಾಚಾಪುರ, ಆನ್ವರಿ, ಸರ್ಜಾಪುರ, ಚಿತ್ತಾಪುರ, ಉಪ್ಪಾರನಂದಿಹಾಳ ಸೇರಿದಂತೆ ಇತರೆ ಪಂಚಾಯತಿಗಳಲ್ಲಿ ಕೋಟ್ಯಾಂತರ ಹಣ ದುರ್ಬಳಿಕೆ ಮಾಡಿರುವ ವರದಿಗಳು ಜಿಲ್ಲಾ ಪಂಚಾಯತಿ ಕಛೇರಿಯಲ್ಲಿ ಧೂಳು ತಿನ್ನುತ್ತಿವೆ. 2019-20ನೇ ಸಾಲಿನ ಉದ್ಯೋಗ ಖಾತ್ರಿ ಯೋಜನೆಯಡಿ ಮೇಲ್ಕಾಣಿಸಿದ ಗ್ರಾಮ ಪಂಚಾಯತಿಗಳಲ್ಲಿ 3964 ಕಾಮಗಾರಿಗೆ ಕೂಲಿ ಮತ್ತು ಸಾಮಾಗ್ರಿ ಖರೀದಿಗೆ ರೂ.31 ಕೋಟಿ ಹಣ ಖರ್ಚು ಹಾಕಲಾಗಿದೆ.

ಸಾಮಾಜಿಕ ಲೆಕ್ಕ ಪರಿಶೋಧನೆಯಲ್ಲಿ ವಿವಿಧ ಕಾರಣಗಳಿಂದ ವಸೂಲಾತಿಗೆ ರೂ.13.43 ಲಕ್ಷ ಹಾಗೂ ವಿವಿಧ ಕಾರಣಗಳಿಂದ ಅಪೂರ್ಣ ಮತ್ತು ಆಕ್ಷೇಪಾರ್ಹ ಕಾಮಗಾರಿ ಹಣ ರೂ.11.93 ಕೋಟಿ ಸೇರಿದಂತೆ ಒಟ್ಟು ರೂ.12.07 ಕೋಟಿ ಹಣ ದುರ್ಬಳಿಕೆ ಮಾಡಿಕೊಂಡ ಬಗ್ಗೆ ವರದಿಗಳು ಸಲ್ಲಿಕೆಯಾಗಿರುವುದು ಸದ್ಯ ಪ್ರಕರಣ ದಾಖಲಿಸಲು ನಿರ್ದಶನವಾಗಿದೆ. ಅದೇ ರೀತಿ 2021-22ರ ಕಾಮಗಾರಿ ರೂ.30.60 ಕೋಟಿಯಲ್ಲಿ ರೂ.10.18 ಕೋಟಿ ಹಣ ದುರ್ಬಳಿಕೆ ಆಗಿರುವ ದಾಖಲೆಗಳನ್ನು ಪರಿಶೀಲಿಸಲಾಗಿದೆ. ಈ ರೀತಿಯಾಗಿ ಹಲವು ವರ್ಷಗಳಿಂದ ಸಾಮಾಜಿಕ ಲೆಕ್ಕ ಪರಿಶೋಧನೆ ಸಮಿತಿ ಸಾರ್ವಜನಿಕ ಸಭೆ ಆಯೋಜಿಸಿ ಜನರ ಮಧ್ಯೆ ಲೆಕ್ಕಪತ್ರ ಪರಿಶೀಲನೆ ನಡೆಸುತ್ತದೆ.ಸಾರ್ವಜನಿಕರ ಆಕ್ಷೇಪಣೆ, ಕಾಮಗಾರಿ ಸ್ಥಳ ಮತ್ತು ಕಡತಗಳ ಪರಿಶೀಲನೆ ಆಧರಿಸಿ ವಸೂಲಿ ಮಾಡಬಹುದಾದ ಹಣ ಮತ್ತು ಅಪೂರ್ಣ ಕಾಮಗಾರಿಗೆ ಬಳಸಿದ ಹಣ ಕುರಿತು ವರದಿ ಸಲ್ಲಿಸುತ್ತ ಬಂದಿದೆ.

ವರದಿ ಆಧರಿಸಿ ಕ್ರಮ ಕೈಗೊಳ್ಳದೆ ಅಧಿಕಾರಿಗಳು ತಾಲೂಕು ಆಡಾಕ್ ಕಮೀಟಿ ಎಂಬ ಹೆಸರಲ್ಲಿ ಇಡೀ ಪ್ರಕಣರ ಮುಚ್ಚಿ ಹಾಕುತ್ತ ಬಂದಿರುವುದು ಮೇಲ್ನೋಟಕ್ಕೆ ಸಾಬೀತಾಗಿದೆ. ಕಾರಣ 2019-20ರ ಲೆಕ್ಕ ಪರಿಶೋಧನೆ ವರದಿ ಆಧಾರ ಇಟ್ಟುಕೊಂಡು ಪ್ರಕರಣ ದಾಖಲಿಸಿ, 2010-ರಿಂದ ಈ ವರೆಗಿನ ಲೆಕ್ಕ ಪರಿಶೋಧನೆ ವರದಿ ಪರಿಶೀಲನೆ ನಡೆಸಬೇಕು. ವರದಿ ಅಂಶಗಳನ್ನು ಮುಂದಿಟ್ಟ ತಾಲೂಕು ಆಡಾಕ ಕಮಿಟಿ ಹೆಸರಲ್ಲಿ ನಡೆಸಿರುವ ಭ್ರಷ್ಟಾಚಾರದ ತನಿಖೆ ನಡೆಸಬೇಕು. ಸಾಮಾಜಿಕ ಲೆಕ್ಕ ಪರಿಶೋಧನೆ ವರದಿ ಕಡತಗಳು ಧೂಳು ಜಾಡಿಸಿ ಕೋಟ್ಯಾಂತರ ಹಣ ದುರ್ಬಳಿಕೆ ಮಾಡಿಕೊಂಡಿರುವ ಆರೋಪಿತರನ್ನು ಬಂಧಿಸಿ, ದುರ್ಬಳಿಕೆ ಹಣವನ್ನು ಮರುಪಾವತಿಸಿ ಕೊಳ್ಳುವ ರೀತಿಯಲ್ಲಿ ಕಾನೂನು ಕ್ರಮ ಕೈಗೊಳ್ಳಬೇಕೆಂದು ಆಗ್ರಹಿಸಿದರು. ಈ ಸಂದರ್ಭದಲ್ಲಿ ಅಕ್ರಂಪಾಷ, ಯಲ್ಲಪ್ಪಹಾಲಬಾವಿ,ನಾಗರಾಜ.ಹೆಚ್. ಪರಶುರಾಮ್ ಗುಡಿಜಾವೂರು, ದುರಗಪ್ಪ, ಖಾಸಿಂಸಾಬ ಶಣ್ಣುಖರೆಡ್ಡಿ, ಹನುಮೇಶ ಕುಪ್ಪಿಗುಡ್ಡ, ಹುಸೇನಪ್ಪ ನಾಯಕ, ಮಾಳಪ್ಪಗೌಡ ಸೇರಿದಂತೆ ಇದ್ದರು.

# ಸಂತಕವಿ ಸರ್ವಜ್ಞ ಕನ್ನಡ ನಾಡಿನ ಸಂಪತ್ತು: ವೈ ಸುರೇಂದ್ರಬಾಬು ಕುಂಬಾರ



ನೈಜ್ಯ ದೆಸೆ ನ್ಯೂಸ್

**ರಾಯಚೂರು: ಜಿಲ್ಲಾಡಳಿತ, ಜಿಲ್ಲಾ ಪಂಚಾಯಿತಿ, ಮಹಾನಗರ ಪಾಲಿಕೆ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಯೋಗದಲ್ಲಿ ಫೆ.20ರಂದು ಸಂತ ಕವಿ ಸರ್ವಜ್ಞ ಜಯಂತಿ ಆಚರಿಸಲಾಯಿತು. ನಗರದ ಡಾ.ಬಿ.ಆರ್.ಅಂಬೇಡ್ಕರ ವೃತ್ತದಲ್ಲಿ ಸಂತಕವಿ ಸರ್ವಜ್ಞ ಅವರ ಭಾವಚಿತ್ರದ ಮೆರವಣಿಗೆಗೆ ಸಣ್ಣ ನೀರಾವರಿ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರಾದ ಎನ್.ಎಸ್.ಬೋಸರಾಜು ಅವರು ಚಾಲನೆ ನೀಡಿದರು.**

ಅಲ್ಲಿಂದ ಆರಂಭಗೊಂಡ ಮೆರವಣಿಗೆಯು ನಗರದ ಪ್ರಮುಖ ವೃತ್ತಗಳಲ್ಲಿ ಸಂಚರಿಸಿ ಜಿಲ್ಲಾ ರಂಗಮಂದಿರಕ್ಕೆ ಬಂದು ಸೇರಿತು. ಡೊಳ್ಳಿನ ಕಲಾ ತಂಡಗಳ ಮೂಲಕ ಮೆರವಣಿಗೆಯು ಅದ್ದೂರಿಯಾಗಿ ನಡೆಯಿತು. ಮೆರವಣಿಗೆಯಲ್ಲಿ ಮುಖಂಡರಾದ ಕೆ.ಶಾಂತಪ್ಪ, ಸಹಾಯಕ ಆಯುಕ್ತರಾದ ಡಾ.ಹಂಪಣ್ಣ ಸಜ್ಜನ್, ತಹಸೀಲ್ದಾರ ಸುರೇಶ ವರ್ಮಾ ಸೇರಿದಂತೆ ಸಮಾಜದ ಪ್ರಮುಖರು ಇದ್ದರು. ಬಳಿಕ ಜಿಲ್ಲಾ ರಂಗಮಂದಿರದಲ್ಲಿ ನಡೆದ ವೇದಿಕೆ ಕಾರ್ಯಕ್ರಮದಲ್ಲಿ ಯರಮರಸ್‌ನ ನಿವೃತ್ತ ಪ್ರಾಂಶುಪಾಲರಾದ ವೈ ಸುರೇಂದ್ರಬಾಬು ಕುಂಬಾರ ಅವರು ವಿಶೇಷ ಉಪನ್ಯಾಸ ನೀಡಿ, 16ನೇ ಶತಮಾನದ ಶ್ರೇಷ್ಠ ಕವಿಗಳಲ್ಲೊಬ್ಬರಾದ ಸರ್ವಜ್ಞ ಅವರು ತ್ರಿಪದಿ ರಚನೆಗಳ ಮೂಲಕ ಅರ್ಥಪೂರ್ಣ ವಚನಗಳನ್ನು ಜನತೆಗೆ ನೀಡಿದ್ದಾರೆ.

ಹರಿತವಾದ ತ್ರಿಪದಿಯ ಸಾಲುಗಳ ಮೂಲಕ ಸಮಾಜದ ಅಂಕುಡೊಂಕುಗಳನ್ನು ತಿದ್ದುವ ಕೆಲಸ ಮಾಡಿದ್ದಾರೆ. ಸರ್ವಜ್ಞ ಅವರು ಕನ್ನಡ ನಾಡಿನ ಸಂಪತ್ತು ಎಂದು ತಿಳಿಸಿದರು. ಮಹಾನಗರ ಪಾಲಿಕೆಯ ಸಮುದಾಯ ಸಂಘಟನಾಧಿಕಾರಿ ಕೃಷ್ಣ ಕಟ್ಟಿಮನಿ ಅವರು ಮಾತನಾಡಿ, ಸರ್ವಜ್ಞ ಅವರು ಕೇವಲ ಒಂದು ಜಾತಿಗೆ ಸೀಮಿತವಾಗಿಲ್ಲ. ಅವರು ಇಡೀ ಜಗತ್ತಿಗೆ ಉತ್ತಮ ಸಂದೇಶಗಳನ್ನು ನೀಡಿದ ಕವಿಯಾಗಿದ್ದಾರೆ. ಸಮ ಸಮಾಜ ನಿರ್ಮಾಣ ಕುರಿತು ಜನತೆಗೆ ತಮ್ಮ ವಚನಗಳ ಮೂಲಕ ಉತ್ತಮ ಸಂದೇಶ ನೀಡಿದರು.

ಸಮಾಜ ಇನ್ನಷ್ಟು ಅಭಿವೃದ್ಧಿಯಾಗಲು ಸಮಾಜದ ಜನರು ತಮ್ಮ ಮಕ್ಕಳಿಗೆ ಉತ್ತಮ ಶಿಕ್ಷಣ ಕೊಡಿಸಬೇಕು ಎಂದು ಸಲಹೆ ಮಾಡಿದರು. ಸಮಾರಂಭದಲ್ಲಿ ಗ್ರೇಡ್ 2 ತಹಸೀಲ್ದಾರ ಪರಶುರಾಮ, ಸಮಾಜದ ಪ್ರಮುಖರಾದ ಶಿವರಾಜಪ್ಪ, ವೀರಭದ್ರಪ್ಪ, ಬಸವರಾಜ, ಶಿವಪ್ರಕಾಶ, ಭೀಮಪ್ಪ, ಲಕ್ಷ್ಮೀರೆಡ್ಡಿ, ತಿಮ್ಮಪ್ಪ, ಬಸವರಾಜ, ರಮೇಶ, ನರಸಿಂಗಪ್ಪ, ಸಾಯಿಬಾಬಾ ಹಾಗೂ ಇತರರು ಇದ್ದರು.

# ಅಸುರಕ್ಷಿತ ನೀರು ಪೂರೈಕೆ ತಡೆಗೆ ಅಧಿಕಾರಿಗಳಿಗೆ ಮನವಿ

ನೈಜ್ಯ ದೆಸೆ ನ್ಯೂಸ್

**ಮಾನ್ವಿ: ತಾಲ್ಲೂಕು ಹಾಗೂ ಪಟ್ಟಣ ವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಕೆಲವು ಶುದ್ಧ ಕುಡಿಯುವ ನೀರಿನ ಘಟಕಗಳಲ್ಲಿ ಸುರಕ್ಷಿತವಲ್ಲದ ಪದಾರ್ಥಗಳನ್ನು ನೀರಿಗೆ ಮಿಶ್ರಣ ಮಾಡಲಾಗುತ್ತಿದೆ ಎಂಬ ಆತಂಕಕಾರಿ ಮಾಹಿತಿ ಲಭ್ಯವಾಗುತ್ತಿರುವ ಹಿನ್ನೆಲೆಯಲ್ಲಿ, ಸಂಬಂಧಿತ ಘಟಕಗಳ ಮೇಲೆ ತಕ್ಷಣವೇ ತನಿಖೆ ನಡೆಸಿ ಅಗತ್ಯ ಕ್ರಮ ಕೈಗೊಳ್ಳಬೇಕು ಎಂದು ವಿಜಯ ಕರ್ನಾಟಕ ರಕ್ಷಣಾ ವೇದಿಕೆ ಮಾನ್ವಿ ತಾಲ್ಲೂಕು ಘಟಕದ ಜಿಲ್ಲಾ ಕಾರ್ಯಧ್ಯಕ್ಷ ಆನಂದಸ್ವಾಮಿ ಹಿರೇಮಠ ಅವರು ತಹಶೀಲ್ದಾರ್‌ರಿಗೆ ಸಲ್ಲಿಸಿದ ಮನವಿಯಲ್ಲಿ ಒತ್ತಾಯಿಸಿದರು.**



ಈ ಕುರಿತು ಅವರು ಮಾತನಾಡಿ, ಕೆಲವು ಘಟಕಗಳಿಂದ ವಿತರಿಸಲಾಗುತ್ತಿರುವ ನೀರನ್ನು ಬಳಸುತ್ತಿರುವ ಸಾರ್ವಜನಿಕರಲ್ಲಿ ಹೊಟ್ಟೆ ಸಮಸ್ಯೆಗಳು, ವಾಂತಿ, ದೌರ್ಬಲ್ಯ ಹಾಗೂ ಇತರೆ ಆರೋಗ್ಯ ಸಮಸ್ಯೆಗಳು ಕಾಣಿಸಿಕೊಳ್ಳುತ್ತಿರುವ ಬಗ್ಗೆ ಹಲವು ದೂರುಗಳು ಕೇಳಿಬರುತ್ತಿವೆ ಎಂದು ಹೇಳಿದರು. ವಿಶೇಷವಾಗಿ ಮಕ್ಕಳು, ಹಿರಿಯ ನಾಗರಿಕರು ಮತ್ತು ಮಹಿಳೆಯರು ಹೆಚ್ಚು ತೊಂದರೆ ಅನುಭವಿಸುತ್ತಿದ್ದಾರೆ ಎಂದು ತಿಳಿಸಿದರು. ಆದ್ದರಿಂದ ತಾಲ್ಲೂಕು ಆಡಳಿತ, ಪುರಸಭೆ, ಆಹಾರ ಸುರಕ್ಷತಾ ಇಲಾಖೆ ಹಾಗೂ ಆರೋಗ್ಯ ಇಲಾಖೆ ಅಧಿಕಾರಿಗಳು ಸಂಯುಕ್ತವಾಗಿ ಎಲ್ಲಾ ನೀರಿನ ಘಟಕಗಳಿಗೆ ಭೇಟಿ ನೀಡಿ ನೀರಿನ ಗುಣಮಟ್ಟವನ್ನು ಪರಿಶೀಲಿಸಬೇಕು.

ನೀರಿನ ಮಾದರಿಗಳನ್ನು ಸಂಗ್ರಹಿಸಿ ಪ್ರಯೋಗಾಲಯದಲ್ಲಿ ಪರೀಕ್ಷೆ ನಡೆಸಿ ಯಾವುದೇ ಅಸುರಕ್ಷಿತ ಅಂಶಗಳು ಪತ್ತೆಯಾದಲ್ಲಿ ಸಂಬಂಧಿತ ಘಟಕಗಳ ವಿರುದ್ಧ ಕಾನೂನು ಕ್ರಮ ಜರುಗಿಸಬೇಕು ಎಂದು ಮನವಿಯಲ್ಲಿ ಆಗ್ರಹಿಸಲಾಗಿದೆ. ಈ ಸಂದರ್ಭದಲ್ಲಿ ಜಿಲ್ಲಾ ಉಪಾಧ್ಯಕ್ಷ ಶೇಖರ ಗೌಡ ಮಾಲಿ ಪಾಟೀಲ್, ಜಿಲ್ಲಾ ಸಂಘಟನಾ ಕಾರ್ಯದರ್ಶಿ ಕೆ.ಶಿವಕುಮಾರ್, ತಾಲೂಕಾಧ್ಯಕ್ಷ ಭೀಮಣ್ಣ ಮುದಗಲ್, ತಾಲೂಕ ಉಪಾಧ್ಯಕ್ಷ ಅಫ್ರದ್, ನಗರ ಘಟಕ ಅಧ್ಯಕ್ಷ ನಾಗರಾಜ್ ಮೆಟ್ಟಿ, ನಗರ ಘಟಕ ಗೌರವಾಧ್ಯಕ್ಷ ಮನೋಹರ್ ಆಚಾರಿ, ಮಲ್ಲಿಕಾರ್ಜುನ ಸ್ವಾಮಿ, ದೊಡ್ಡಣ್ಣ ಹೂಗಾರ್, ಸುನಿಲ್ ಕುಮಾರ್ ಬೆಟ್ಟದೂರು, ಆಟೋ ಘಟಕ ಅಧ್ಯಕ್ಷ ಹನುಮೇಶ ನಾಯಕ, ನಿಸರ್ ಅಹ್ಮದ್, ಸೈ. ಶಕ್ಷಾವಲಿ, ಬಂದೇನವಾಜ್ ಸೇರಿದಂತೆ ಹಲವರು ಉಪಸ್ಥಿತರಿದ್ದರು.

# ಮಕ್ಕಳ ಪ್ರತಿಭೆ ಆನಾವರಣಕ್ಕೆ FLN-ಕಲಿಕಾ ಹಬ್ಬ ಒಂದು ವೇದಿಕೆ ಸೋಮಲಿಂಗಪ್ಪ ದೈಹಿಕ ಶಿಕ್ಷಣಾಧಿಕಾರಿಗಳು

ನೈಜ್ಯ ದೆಸೆ ನ್ಯೂಸ್

**ಸಿಂಧನೂರು: ಕಲಿಕಾ ಹಬ್ಬ-ಬುನಾದಿ ಸಾಕ್ಷರತೆ ಮತ್ತು ಸಂಖ್ಯಾಸಾಮರ್ಥ್ಯ ಆಂದೋಲನ ಶಾಲಾ ಶಿಕ್ಷಣ ಇಲಾಖೆ ಮಾರ್ಗದರ್ಶನದಲ್ಲಿ, ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಾರ್ಯಾಲಯ ಮತ್ತು ಕ್ಷೇತ್ರ ಸಮನ್ವಯಾಧಿಕಾರಿಗಳ ಕಾರ್ಯಾಲಯ, ಸಿಂಧನೂರು ಸಮೂಹ ಸಂಪನ್ಮೂಲ ಕೇಂದ್ರ (ಬಿ.ಬಿ.ಪಿ. ಕ್ಯಾಂಪ್) ಹಾಗೂ ಸರಕಾರಿ ಹಿರಿಯ ಪ್ರಾಥಮಿಕ ಶಾಲೆ ಗುರುಸಿದ್ದಯ್ಯನಮಠ ಇವರ ಸಹಯೋಗದಲ್ಲಿ, ಸರಕಾರಿ ಕಿರಿಯ ಪ್ರಾಥಮಿಕ ಶಾಲೆ ಗುರುಸಿದ್ದಯ್ಯನಮಠ, ಉಪ್ಪಾರವಾಡಿ ವಾರ್ಡ್ ನಂ?5, ಸಿಂಧನೂರಿನಲ್ಲಿ *"ಕಲಿಕಾ ಹಬ್ಬ"*ವನ್ನು ಉತ್ಸಾಹಭರಿತವಾಗಿ ಆಯೋಜಿಸಲಾಯಿತು.**

ಮಕ್ಕಳು ಕುಂಭ, ಡೊಳ್ಳು ಕುಣಿತ, ಕೋಲಾಟ ನೃತ್ಯದೊಂದಿಗೆ ವಾರ್ಡ ನಂ-05 ರ ಆರಾಧ್ಯ ದೈವ ಶ್ರೀ ಲಕ್ಷ್ಮೀ ವೆಂಕಟರಮಣ ಗುಡಿಯಿಂದ ಶಾಲೆಯವರೆಗೆ ಮೆರವಣಿಗೆ ಮಾಡಲಾಯಿತು. ಪ್ರಾಸ್ತವಿಕವಾಗಿ ವಲಯದ ಸಿಆರ್ ಪಿ ಗಳಾದ ಚನ್ನನಗೌಡ ಮಾತನಾಡಿದರು. ಕಲಿಕಾ ಹಬ್ಬದ ಉದ್ಘಾಟನೆಯನ್ನು ಸೋಮಲಿಂಗಪ್ಪ ದೈಹಿಕ ಶಿಕ್ಷಣಾಧಿಕಾರಿಗಳು ನೆರವೇರಿಸಿ ಮಾತನಾಡಿ ಕಲಿಕಾ ಹಬ್ಬ ಮಕ್ಕಳ ಪ್ರತಿಭೆ ಅನಾವರಣಕ್ಕೆ ಕಲಿಕಾ ಹಬ್ಬ ಒಂದು ವೇದಿಕೆಯಾಘಿದೆ. ಶಾಲೆಯಲ್ಲಿ ಈ ಹಬ್ಬ ಕಲಿಕಾ ವಾತಾವರಣವನ್ನು ನಿರ್ಮಾಣ ಮಾಡುತ್ತದೆ ಎಂದರು. ನಂತರ BRPಗಳಾದ ಬಸವರಾಜ ಆನೆಗುಂದಿಯವರು ಮಾತನಾಡಿದರು. ನಂತರ ಶಿಕ್ಷಣ ಸಂಯೋಜಕರಾದ ಕುಮಾರಸ್ವಾಮಿ ಹಿರೇಮಠ ಮಾತನಾಡಿದರು.



ಮುಖ್ಯ-ತಿಥಿಗಳಾಗಿ ಆಗಮಿಸಿದ ನಗರಸಭೆ ಸದಸ್ಯರಾದ ಹನುಮೇಶ ಕೆ ಇವರು ಮಾತನಾಡಿ ಕಲಿಕಾ ಹಬ್ಬ ಈ ಶಾಲೆಯಲ್ಲಿ ಒಂದು ಹಬ್ಬದ ವಾತಾವರಣವನ್ನು ನಿರ್ಮಾಣ ಮಾಡಿದೆ. ಮಕ್ಕಳು ಕಲಿಕಾ ಚಟುವಟಿಕೆಯಲ್ಲಿ ತೊಡಗುವಂತೆ ಪ್ರೇರೆಪಿಸಬೇಕು ಎಂದು ಹೇಳಿ ನಮ್ಮ ಈ ಶಾಳೆಗೆ ಎಲ್ಲಾ ರೀತಿಯ ಸಹಕಾರ ನೀಡುವುದಾಗಿ ತಿಳಿಸಿದರು.

ಈ ಕಾರ್ಯಕ್ರಮದಲ್ಲಿ FLN- ಕಲಿಕಾ ಹಬ್ಬದಲ್ಲಿ 8 ಶಾಲೆಯ ವಿದ್ಯಾರ್ಥಿಗಳು ಶಿಕ್ಷಕರು ವಿವಿಧ ಶಾಲೆಗಳಿಂದ ನಿರ್ಣಾಯಕರಾಗಿ ಶಿಕ್ಷಕರು ಭಾಗವಹಿಸಿದ್ದರು.

ಕಲಿಕಾ ಹಬ್ಬದಲ್ಲಿ ನಮ್ಮ ಶಾಲೆಯ ವಿದ್ಯಾರ್ಥಿಗಳು ವಿಶೇಷವಾಗಿ ಈಐಓ ಆಹಾರ ಮೇಳವನ್ನು ಆಯೋಜಿಸಲಾಗಿತ್ತು. ಬೇರೆ ಬೇರೆ ಶಾಲೆಯಿಂದ ಬಂದಂತಹ ವಿದ್ಯಾರ್ಥಿಗಳು ಶಿಕ್ಷಕರು ಪೋಷಕರು ಮಕ್ಕಳು ಮನೆಯಿಂದ ತಯಾರಿಸಿಕೊಂಡು ಬಂದಂತಹ ಬಗೆಬಗೆಯ ಆಹಾರ ಖಾದ್ಯಗಳನ್ನು ಖರೀದಿಸಿ ರುಚಿ ನೋಡಿದರು. ಮಕ್ಕಳು ತುಂಬಾ ಸಂತೋಷಪಟ್ಟರು.

ಈ ಕಾರ್ಯಕ್ರಮವು ಬುನಾದಿ ಸಾಕ್ಷರತೆ ಮತ್ತು ಸಂಖ್ಯಾಸಾಮರ್ಥ್ಯ (FLN) ಆಂದೋಲನದ ಭಾಗವಾಗಿ ವಿದ್ಯಾರ್ಥಿಗಳಲ್ಲಿ ಓದು, ಬರಹ ಹಾಗೂ ಮೂಲಭೂತ ಗಣಿತ ಕೌಶಲ್ಯಗಳನ್ನು ಗಟ್ಟಿಗೊಳಿಸುವ ಉದ್ದೇಶದಿಂದ ಹಮ್ಮಿಕೊಳ್ಳಲಾಯಿತು.

ಕಲಿಕೆಯನ್ನು ಕೇವಲ ಪಾಠಪುಸ್ತಕಗಳಲ್ಲೇ ಸೀಮಿತಗೊಳಿಸದೆ, ಆಟ-ಪಾಟ, ಸೃಜನಾತ್ಮಕ ಚಟುವಟಿಕೆಗಳ ಮೂಲಕ ಮಕ್ಕಳಿಗೆ ಆನಂದದಾಯಕವಾಗಿ ತಲುಪಿಸುವ ಪ್ರಯತ್ನ ಮಾಡಲಾಯಿತು.

ವಿದ್ಯಾರ್ಥಿಗಳಿಂದ ನಡೆದ ಪ್ರಮುಖ ಚಟುವಟಿಕೆಗಳು:



- ❖ ರಸಪ್ರಶ್ನೆ ಸ್ಪರ್ಧೆ
- ❖ ಆಹಾರ ಮತ್ತು ಪೌಷ್ಟಿಕಾಂಶ ಕುರಿತ ಜಾಗೃತಿ ಕಾರ್ಯಕ್ರಮ
- ❖ ಮೆಮೊರಿ ಪರೀಕ್ಷೆ
- ❖ ಕಥೆ ಹೇಳುವಿಕೆ
- ❖ ಕೈಬರಹ ಮತ್ತು ಕ್ಯಾಲಿಗ್ರಫಿ ಸ್ಪರ್ಧೆ
- ❖ ಸಂತೋಷದಾಯಕ ಗಣಿತ ಚಟುವಟಿಕೆಗಳು
- ❖ ಪೋಷಕರು-ಮಕ್ಕಳ ಸಹಸಂಬಂಧ ಕಾರ್ಯಕ್ರಮ
- ❖ ಛದ್ಮವೇಶ ಸ್ಪರ್ಧೆ

ಈ ಚಟುವಟಿಕೆಗಳ ಮೂಲಕ ಮಕ್ಕಳಲ್ಲಿ ಆತ್ಮವಿಶ್ವಾಸ, ಸಂವಹನ ಕೌಶಲ್ಯ, ವೇದಿಕೆ ಧೈರ್ಯ, ತಂಡದ ಮನೋಭಾವ ಹಾಗೂ ಸೃಜನಾತ್ಮಕತೆ ಹೆಚ್ಚುವಂತೆ ಪ್ರೇರಣೆ ನೀಡಲಾಯಿತು.

ವಿಶೇಷವಾಗಿ ಪೋಷಕರು ಮಕ್ಕಳೊಂದಿಗೆ ಸೇರಿ ಭಾಗವಹಿಸಿರುವುದು ಕಾರ್ಯಕ್ರಮಕ್ಕೆ ವಿಶೇಷ ಮೆರುಗು ನೀಡಿತು. ಕಾರ್ಯಕ್ರಮದ ಅಂತ್ಯದಲ್ಲಿ ಉತ್ತಮ ಪ್ರದರ್ಶನ ನೀಡಿದ ವಿದ್ಯಾರ್ಥಿಗಳಿಗೆ ಪ್ರಶಂಸಾಪತ್ರ ಹಾಗೂ ಬಹುಮಾನಗಳನ್ನು ವಿತರಿಸಲಾಯಿತು. ಶಿಕ್ಷಕರು ಮಕ್ಕಳ ಶೈಕ್ಷಣಿಕ ಪ್ರಗತಿಗೆ ನಿರಂತರ ಸಹಕಾರ ನೀಡುವ ಬಗ್ಗೆ ಭರವಸೆ ವ್ಯಕ್ತಪಡಿಸಿದರು.

"ಕಲಿಕಾ ಹಬ್ಬ"ವು ಶಾಲಾ ವಾತಾವರಣವನ್ನು ಹಬ್ಬದಂತೆಯೇ ರೂಪಿಸಿ, ಕಲಿಕೆಯನ್ನು ಸಂತೋಷದಾಯಕ ಅನುಭವವಾಗಿಸಲು ಮಾಡಿದ ಮಹತ್ವದ ಪ್ರಯತ್ನವಾಗಿತ್ತು.

ಕಾರ್ಯಕ್ರಮದಲ್ಲಿ ಶಿಕ್ಷಣ ಸಂಯೋಜಕರಾದ ಹುಲುಗಪ್ಪ. BRPಗಳಾದ ಮೈನುದ್ದೀನ್, ನಾಗಪ್ಪ, ಮಂಜುನಾಥ ಹಿರೇಮಠ ಅಖಕ ಗಳಾದ ಗುರುಸ್ವಾಮಿ, ಪ್ರಮೋದ, ಹನುಂತ ಷಣ್ಮುಖಗೌಡ,ರಾಘವೇಂದ್ರ, ಮಹಾವೀರ ಇತರರು ಇದ್ದರು.

ವಾರ್ಡ್ ನಂ-05 ರ ಶಿಕ್ಷಣ ಪ್ರೇಮಿಗಳಾದ ನಾಗರಾಜ ದೇವರ ಗುಡಿ ಮಾಜಿ ಎಸ್ ಡಿ ಎಂ ಸಿ ಅಧ್ಯಕ್ಷರು, ಬಸವರಾಜ್, ರಾಮಕೃಷ್ಣ ಉಪ್ಪಾರ, ಶ್ರೀನಿವಾಸ ಕುಡಿತಿನಿ,ಶಾಲೆಯ ಖಆಒಅ ಅಧ್ಯಕ್ಷರಾದ ಹುಲಿಗೆಮ್ಮ ಮತ್ತು ಸದಸ್ಯರು ಇದ್ದರು.ಶಾಲೆಯ ಶಿಕ್ಷಕರು ಅಡುಗೆ ಸಿಬ್ಬಂದಿಯವರು, ವಾರ್ಡ್ ನಂ 05ರ ಸದಸ್ಯರು ಪ್ರಾಥಮಿಕ ಶಾಲಾ ಶಿಕ್ಷಕ ಸಂಘದ ಮಾಜಿ ಅಧ್ಯಕ್ಷರಾದ ಮಾನಮ್ಮ ನಾಯಕ, ಶಿಕ್ಷಕರು ಪತ್ತಿನ ಸಂಘದ ಅಧ್ಯಕ್ಷರಾದ ಮಲ್ಲಪ್ಪ ಮೊದಲಾದವರು ಇದ್ದರು.

ಈ ಕಾರ್ಯಕ್ರಮದ ನಿರೂಪಣೆಯನ್ನು ತಿಮ್ಮಪ್ಪ ದೇಸಾಯಿ ಶಿಕ್ಷಕರು ನೇರವೇರಿಸಿದರು. ಸಾವಿತ್ರಿ ದೀಕ್ಷತ್ ಇವರು ನಾಡಗೀತೆ ಹಾಗೂ ಸ್ವಾಗತ ಭಾಷಣ ಮಾಡಿದರು . ಕೊನದಾಗಿ ಮುಖ್ಯಗುರುಗಳಾದ ಗಿರೀಶ್ ಇವರು ಈ ಕಾರ್ಯಕ್ರಮಕ್ಕೆ ಆಗಮಿಸಿದ ಎಲ್ಲರಿಗೂ ಧನ್ಯವಾದಗಳನ್ನು ಹೇಳಿದರು.